# ಡಾ. ಬಿ. ಕೆ. ಹಿರೇಮಠರ ಜೀವನ, ಸಾಧನೆ: ಒಂದು ಸ್ಥೂಲ ಅವಲೋಕನ

**ಜಿ. ವೀರಭದ್ರಗೌಡ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

**DOI: https://doi.org/10.5281/zenodo.18471009**

**ABSTRACT:**

ಡಾ॥ ಬಿ.ಕೆ.ಹಿರೇಮಠ ಅವರು ಅಪರೂಪದ ಕನ್ನಡ ಪ್ರಾಧ್ಯಾಪಕರು ಮತ್ತು ಚಿತ್ರಕಲಾವಿದರು. ಕನ್ನಡ ಸಂಶೋಧನೆ ಮತ್ತು ಕರ್ನಾಟಕ ಚಿತ್ರಕಲೆಯಲ್ಲಿ ಅವರದೇ ಆದ ಅಪರೂಪದ ಕೊಡುಗೆಯನ್ನು ನೀಡಿದ ಪ್ರತಿಭಾಸಂಪನ್ನರು. ತಮ್ಮ ಲೇಖನಿ ಮತ್ತು ಕುಂಚಗಳನ್ನು ಜವಾಬ್ದಾರಿಯೆಂದು ಭಾವಿಸಿ ದುಡಿಸಿದವರು. ಸಂಶೋಧನೆ, ಸಂಪಾದನೆ, ಕಲಾಸಾಹಿತ್ಯ, ಅನುವಾದ ಪ್ರಕಾರಗಳಲ್ಲಿ ಕೃಷಿಗೈದಿದ್ದಾರೆ. ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಹಳೆಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಹಾಗೂ ಶರಣ ಪರಂಪರೆ ಕುರಿತ ಸಾಹಿತ್ಯ ಪ್ರಕಾರ ಮತ್ತು ಕ್ಷೇತ್ರಗಳ ಅಧ್ಯಯನಗಳು ಇವರ ಸಂಶೋಧನಾ ವಲಯಗಳಾಗಿವೆ. ಸಾಹಿತ್ಯದ ಶ್ರೀಮಂತ ಓದು ಅಧ್ಯಯನಗಳ ಅನುಭವದಿಂದ ಇವರ ಕುಂಚ ಫಲಗಳು ಒಂದು ಪ್ರತ್ಯೇಕ ದೃಷ್ಟಿಯಿಂದ ಅವಲೋಕಿಸಲು ಪ್ರೇರೇಪಿಸುತ್ತವೆ. ಅವರ ಕಲಾಕೃತಿಗಳು ಹೊಂದಿರುವ ಸಂಕೇತಗಳು ಹಾಗೂ ಅವು ವಿಸ್ತರಿಸುವ ಚಿತ್ರಭಾಷೆ ವಿಶಿಷ್ಟವಾದವು. ಇಂತಹ ಅಪರೂಪದ ವಿದ್ವಾಂಸರ ಜೀವನ ಸಾಧನೆಯನ್ನು ಪ್ರಸ್ತುತ ಬರಹದಲ್ಲಿ; ಕುಟುಂಬದ ಹಿನ್ನೆಲೆ ಮತ್ತು ಬದುಕು, ವೃತ್ತಿ ಜೀವನ, ಸಾಹಿತ್ಯಿಕ ಕೊಡುಗೆ ಹಾಗೂ ಕಲಾ ಸಾಧನೆ ಎಂಬ ನಾಲ್ಕು ಪ್ರಮುಖ ಭಾಗಗಳಲ್ಲಿ ಸ್ಥೂಲವಾಗಿ ಅವಲೋಕಿಸಲಾಗಿದೆ.

**KEYWORDS:**

ಡಾ॥ ಬಿ. ಕೆ. ಹಿರೇಮಠ, ಅಧ್ಯಯನ, ಸಂಶೋಧನೆ, ಸಂಪಾದನೆ, ಹಸ್ತಪ್ರತಿ, ಹಸ್ತಪ್ರತಿಶಾಸ್ತ್ರ, ಚಿತ್ರಕಲೆ, ಕಲಾವಿದ.

## ಪ್ರವೇಶ:

ಡಾ॥ ಬಿ. ಕೆ. ಹಿರೇಮಠ ಅವರು ಕನ್ನಡ ಸಂಶೋಧನೆ ಮತ್ತು ಚಿತ್ರಕಲೆ ಎಂಬ ಎರಡು ಭಿನ್ನ ಕ್ಷೇತ್ರದಲ್ಲಿ ತಮ್ಮದೇ ಆದ ಅಕಾಡೆಮಿಕ್ ಅಸ್ತಿತ್ವವನ್ನು ಸ್ಥಾಪಿಸಿಕೊಂಡವರು. ಉಭಯ ಕ್ಷೇತ್ರಗಳಲ್ಲಿ ಬಹುಸೂಕ್ಷ್ಮ ಒಳನೋಟದಿಂದ ಕೃಷಿಗೈದ ಪ್ರತಿಭಾ ಸಂಪನ್ನರು. ಸಾಹಿತ್ಯ ಮತ್ತು ಕಲಾ ಕ್ಷೇತ್ರಗಳ ಕಾರ್ಯ ಹಾಗೂ ಕಾರ್ಯಶೀಲತೆಯನ್ನು ಸ್ಥೂಲವಾಗಿ ಅವಲೋಕಿಸುವ ಉದ್ದೇಶವನ್ನು ಪ್ರಸ್ತುತ ಬರಹವು ಹೊಂದಿದೆ. ಈ ಪ್ರಯತ್ನಕ್ಕೆ ಅವರ ಮತ್ತು ಅವರ ಕುರಿತು ಮೂಡಿಬಂದ ಸಾಹಿತ್ಯ ಹೊತ್ತಿಗೆಗಳನ್ನು ಹಾಗೂ ನೇರ ಅವರೊಂದಿಗೆ ಮಾತುಕತೆ ನಡೆಸಿದ ಮಾಹಿತಿಯನ್ನು ಆಧರಿಸಿ ನಿರೂಪಿಸಲಾಗಿದೆ.

### ಅ. ಕುಟುಂಬದ ಹಿನ್ನೆಲೆ ಮತ್ತು ಬದುಕು

ಡಾ॥ ಬಿ. ಕೆ. ಹಿರೇಮಠರ ಕುಟುಂಬದ ಪೂರ್ವಜರು ಬಳ್ಳಾರಿ ಸೀಮೆಯ ಹನಕನಹಳ್ಳಿಯವರು. ಕಾಲ ಪ್ರೇರಣೆಯೊಂದಿಗೆ ಗದಗ ಜಿಲ್ಲೆಯ ಹುಲಕೋಟೆಗೆ ಬಂದು ನೆಲೆಸಿದರು. ಸತ್ಪರಂಪರೆಯನ್ನು ಹೊಂದಿದ ಧರ್ಮನಿಷ್ಠ ಕುಟುಂಬವಾಗಿತ್ತು. ಈ ಕುಟುಂಬದ ವೇ॥ ಕೆಂಡಯ್ಯ ಹಾಗೂ ಸೌ॥ ಬಸವ್ವ ದಂಪತಿಗಳ ಎರಡನೆಯ ಸಂತಾನವಾಗಿ, ಜೇಷ್ಠ ಸುಪುತ್ರನಾಗಿ ಡಾ॥ ಬಿ. ಕೆ.ಯವರು 1941ರ ಜುಲೈ 15ರಂದು ಜನಿಸಿದ್ದಾರೆ. ಕುಟುಂಬದ ಮೊದಲ ಗಂಡು ಮಗುವಾಗಿ ಹುಟ್ಟಿದ ಇವರಿಗೆ ಬಸಯ್ಯ' ಎಂದು ನಾಮಕರಣವಾಗುತ್ತದೆ. ಈ ಬಸಯ್ಯನವರೇ ಇಂದು ಕರ್ನಾಟಕದ ಚಿತ್ರಕಲೆ ಮತ್ತು ಕನ್ನಡ ಸಾರಸ್ವತ ಲೋಕದಲ್ಲಿಯ ಡಾ॥ ಬಿ.ಕೆ., ಡಾ॥ ಬಿ.ಕೆ.ಹಿರೇಮಠ ಎಂದು ಕರೆಯಲಾಗುವ ಶ್ರೀ ಬಸಯ್ಯ ಕೆಂಡಯ್ಯ ಹಿರೇಮಠ' ಅವರು. ಇವರಿಗೆ ಒಬ್ಬ ಅಕ್ಕ, ಇಬ್ಬರು ತಂಗಿಯರು, ಇಬ್ಬರು ತಮ್ಮಂದಿರು. ಡಾ॥ ಬಿ.ಕೆ.ಯರ ಬದುಕಿನಲ್ಲಿ ಸಮಾಧಾನ, ಸರಳ ಜೀವನ, ಪ್ರತಿಯೊಂದು ಶ್ರಮವನ್ನು ಗೌರವದಿಂದ ಕಾಣುವ ಅಂತರ್ದೃಷ್ಟಿ ಮುಂತಾದ ಗುಣ-ಶಕ್ತಿಗಳಿಗೆ ಮಾತೃಮೂರ್ತಿಯಾದ ಬಸವ್ವನವರೇ ಪ್ರೇರಣೆ. ಈ ತಾಯಿಯವರು ಸವಣೂರಿನ ಗುರುಸ್ವಾಮಿಮಠದ ಮನೆತನದವರು. ಗುರುಸ್ವಾಮಿಮಠಕ್ಕೆ ಒಂದು ವಿಶೇಷವಾದ ಹಿನ್ನೆಲೆ ಇದೆ. ನವಾಬರ ಕಪಿಮುಷ್ಟಿಯ ವಿರುದ್ಧದ ಎದೆಗಾರಿಕೆಯೋ, ಹಿತದೃಷ್ಟಿಯೋ, ಪ್ರೇರಣೆಯೋ ಅವರ ಮನೆತನದ ಹೆಸರಿಗೊಂದು ವಿಶೇಷಣವನ್ನು ಜೋಡಿಸಿಕೊಂಡು ಹೇಳಿಕೊಳ್ಳುವ ಪರಿಪಾಠವನ್ನು ಹೊಂದಿದೆ. ಅದುವೇ; 'ಬಾದ್ದೂರ ಬಂಡಿ ಮುತ್ತಿನ ಪೆಂಡಿ ಶ್ಯಾನಭೋಗರ ಗುರುಸ್ವಾಮಿಮಠ'. ಡಾ. ಬಿ.ಕೆ.ಯವರ ಬಾಲ್ಯದ ಮೇಲೆ ತಾಯಿಯ ಈ ತವರು ಒಂದು ಅಪರೂಪದ ಪ್ರೇರಣೆಯಾಗಿದೆಂದು ಹೇಳಿಕೊಳ್ಳುತ್ತಾರೆ.

ಡಾ॥ ಬಿ.ಕೆ.ಯವರ ಕುಟುಂಬಕ್ಕೆ ಸ್ಥಿರಾಸ್ತಿಗಳಿದ್ದರೂ, ಇವರ ತಂದೆಯವರು ದಾಯಾದಿಗಳೊಂದಿಗೆ ಯಾವುದೋ ಒಂದು ಮಾತಿನ ಹಠದ ನಿರ್ಧಾರದಿಂದ ಸ್ಥಿರಾಸ್ತಿ ಮನೆ, ಜಮೀನನ್ನು ಅವರಿಗೆ ಬಿಟ್ಟು, ಮಡದಿ ಮಕ್ಕಳೊಂದಿಗೆ ಗದುಗಿಗೆ ಬಂದು ಬಾಡಿಗೆ ಮನೆ ಮಾಡಿಕೊಂಡು ನೆಲೆಸುತ್ತಾರೆ. ಗದಗಿನಲ್ಲಿ ಅವರ ಕುಟುಂಬ ನಿರ್ವಹಣೆಯ ಆರ್ಥಿಕ ಮೂಲವು ತಂದೆಯ ಶ್ರಮವನ್ನು ಆಧರಿಸಬೇಕಾಗುತ್ತದೆ. ವೇ॥ ಕೆಂಡಯ್ಯನವರದು ಸ್ವಾಭಿಮಾನಿ ನಿಲುವಿನ ವ್ಯಕ್ತಿತ್ವ. ಜೋಳಿಗೆ ಬಿಟ್ಟ ಜಂಗಮರಾಗಿ, ಕಾಯದ ಕಾಯಕ ಹಾದಿಯಲ್ಲಿ ವಿವಿಧ ವ್ಯಾಪಾರಗಳನ್ನು ಕೈಗೊಳ್ಳುತ್ತಾ ಸಂಸಾರ ಸಾಗಿಸುತ್ತಿದ್ದರು. ಯಾವುದೇ ವ್ಯಾಪಾರವು, ಅದೊಂದು ರೀತಿಯ ಮನಸ್ಥಿತಿಯನ್ನು ನಿರೀಕ್ಷಿಸುತ್ತದೆ. ಇವರ ತಂದೆಯವರು ಅಂತಹ ಮನಸ್ಥಿತಿಯವರಾಗದ ಕಾರಣವಾಗಿ ಕುಟುಂಬದ ಅಗತ್ಯಗಳನ್ನು ನಿರ್ವಹಿಸುವ ಆದಾಯವು ಅವರ ವ್ಯಾಪಾರದಿಂದ ನಿಯಮಿತವಾಗಿರುತ್ತಿರಲಿಲ್ಲ. ತಾಯಿಯವರು ಸಾಕಿದ ಎಮ್ಮೆಯ ಹೈನು ಮಾರಾಟವು ಕುಟುಂಬದ ಉಪಜೀವನಕ್ಕೆ ಆಸರೆಯಾಗುತ್ತಿತ್ತು. ಇವರಿಗೆ ಹತ್ತನ್ನೆರಡು ವರ್ಷಗಳಾಗುತ್ತಿರುವಾಗ ಅವರ ಅಕ್ಕ ಮತ್ತು ಅವರು ಸೇರಿ ಗದಗಿನಲ್ಲಿ ಅವರು ವಾಸವಿರುವ ಓಣಿಯ ಸ್ಥಿತಿವಂತರ ಮನೆಗಳಿಗೆ ಬಾವಿಗಳಿಂದ ನೀರು ತಂದು

ತುಂಬಿಸುವ ಕೆಲಸ ಮಾಡಿ ಕುಟುಂಬದ ಆರ್ಥಿಕ ನಿರ್ವಹಣೆಗೆ ನೆರವಾಗುತ್ತಿದ್ದರು. ಸಂಚಾರಿ ಸ್ವರೂಪದ ವ್ಯಾಪಾರ ಉದ್ಯೋಗವನ್ನು ನಿಷ್ಠುರತೆಯಿಂದ ನಿರ್ವಹಿಸುವ ಅಪ್ಪ, ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬುದನ್ನು ಪಾಲಿಸುವಂತೆ ಮಾರ್ಗದರ್ಶನ ಮಾಡುವ ತಾಯಿಯವರು. ಈ ಮಾದರಿಗಳನ್ನು ಅನುಸರಿಸುತ್ತಲೇ ಬಾಡಿಗೆ ಸೂರಿನಲ್ಲಿಯೇ ಇವರ ಕುಟುಂಬದ ಜಟಕಾ ಬಂಡಿಯ ಪಯಣ ಸಾಗಿತ್ತು. ನಿರಾಧಾರವಾಗಿ ನೆಲೆ ಬಿಟ್ಟುಬಂದ ಕುಟುಂಬವಾದರೂ ಇದ್ದುದರಲ್ಲಿಯೇ ಅಭಿಮಾನತೆಯಿಂದ ಜೀವಿಸುವ ಸಂಸ್ಕಾರಗಳೇ ಇವರಿಗೆ ಪಿತ್ರಾರ್ಜಿತವಾಗಿ ಬಳುವಳಿಯಾಗಿಬಂದ ಆಸ್ತಿ ಸಂಪತ್ತುಗಳಾಗಿದ್ದವು. ತಂದೆ–ತಾಯಿಯರ ಸರಳ ಬದುಕಿನ ಆಚಾರ–ಸಂಸ್ಕಾರ, ಹಂಚಿತಿನ್ನುವ ಸ್ವಭಾವಗಳಿಂದ ತಾಯಿ ತಿದ್ದಿತೀಡಿ ಬೆಳೆಸಿದ್ದು, ಡಾ॥ ಬಿ.ಕೆ. ಹಿರೇಮಠ ಎಂಬ ಆಲದಮರ ಬೆಳೆದು ನಿಲ್ಲಲು ಭೂಮಿಕೆಯಾಯಿತೇನೋ.

ಡಾ॥ ಬಿ.ಕೆ.ಯವರ ಬಾಲ್ಯವು, ಬೆಳೆದಿದ್ದು, ಸ್ನಾತಕ ಶಿಕ್ಷಣದವರೆಗೆ ಶಿಕ್ಷಣವನ್ನು ಪೂರೈಸಿದ್ದು, ಕಲಾಭ್ಯಾಸಕ್ಕೆ ಅಕಾಡೆಮಿಕ್ ಸಾಮರ್ಥ್ಯಗಳನ್ನು ಕಟ್ಟಿಕೊಂಡದ್ದು ಗದಗಿನಲ್ಲಿಯೇ. ಡಾ॥ ಬಿ.ಕೆ.ಯವರು ವಾಸಿಸುತ್ತಿದ್ದ ಬಾಡಿಗೆ ಮನೆಯ ಹತ್ತಿರದ, ಅಂಭಾಭವಾನಿದೇವಿಯ ದೇವಾಲಯದಲ್ಲಿ ನಡೆಸುತ್ತಿದ್ದ ಗಾವಟಿ ಶಾಲೆಯಲ್ಲಿಯೇ ಅವರ ನಾಲ್ಕನೆಯ ತರಗತಿಯವರೆಗಿನ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಆ ಆಲಯದ ವಿನ್ಯಾಸ ಮತ್ತು ಮೂರ್ತಿಗಳ ಕಲಾವಂತಿಕೆ ಮನಸೂರೆಗೊಂಡು ಇವರನ್ನು ಪ್ರೇರೇಪಿಸಿದ್ದವಂತೆ. ಇದರಿಂದ ಕಲೆಯ ಆಸ್ವಾದ ಕ್ರಿಯೆ ಅಂಕುರಿಸಿತು. ಆ ಬಾಲ್ಯದಲ್ಲಿಯೇ ತಂದೆಯವರು ಯಾವುದೋ ವಿನೋದ, ಕುತೂಹಲಕ್ಕೆ ಚಿತ್ರಿಸಿ ತೋರಿಸಿದ 'ಹನುಮನ' ಚಿತ್ರದಿಂದ ಕಲಾಸಕ್ತಿ ಕುಡಿಯೊಡೆದು, ಅನುಕರಿಸುತ್ತಾ ಬೆರಳುಗಳು ಬಲಗೊಂಡವು. ಆ ಹಾದಿಯಲ್ಲಿಯೇ ಅದಮ್ಯ ಆಸಕ್ತಿಯೊಂದಿಗೆ ಪಯಣ ಬೆಳೆಸುವಂತಾಯಿತೆಂದು ಡಾ॥ ಬಿ.ಕೆ.ಯವರು ಸ್ಮರಿಸಿಕೊಳ್ಳುತ್ತಾರೆ. ಪಾಠಶಾಲೆಯ ಸಾಮಾನ್ಯ ವಿಷಯಗಳ ಕಲಿಕೆ ಬೋಧನೆಯನ್ನು ಅನುಸರಿಸಿ ನಡೆಯುತ್ತಿದ್ದರೆ, ಚಿತ್ರಕಲೆಯನ್ನು ಸ್ವ–ಅಭ್ಯಾಸದಿಂದಲೇ ರೂಢಿಸಿಕೊಳ್ಳುತ್ತಿದ್ದರು. ಪಾಠಶಾಲೆಯಲ್ಲಿ ಪ್ರತಿ ಶುಕ್ರವಾರದಂದು ಸರಸ್ವತಿ ಪೂಜೆಗಾಗಿ ಕರಿಹಲಗೆಯ ಮೇಲೆ ಸರಸ್ವತಿಯ ಚಿತ್ರವನ್ನು ಇವರೇ ಬಿಡಿಸಬೇಕಾಗಿತ್ತು. ವಿದ್ಯಾರ್ಥಿ ದೆಸೆಯಲ್ಲಿಯೇ ಹಿರೇಮಠರ ಕಲಾ ಸಾಮರ್ಥ್ಯವು ಗುರುಮಾನ್ಯತೆ ಮತ್ತು ಸಹಪಾಠಿಗಳ ಮೆಚ್ಚುಗೆಯನ್ನು ಸಂಪಾದಿಸಿತ್ತು. ಅಲ್ಲದೆ, ತಾವು ವಾಸವಿದ್ದ ಓಣಿಯ ಜನರು ಆಚರಿಸುವ ಮಣ್ಣೆತ್ತಿನ ಅಮವಾಸ್ಯೆ, ನಾಗರ ಪಂಚಮಿ, ವಿನಾಯಕ ಚತುರ್ಥಿ ಮುಂತಾದ ಹಬ್ಬಗಳಂದು ಓಣಿಯ ಕುಟುಂಬಗಳಿಗೆ ಮಣ್ಣಿನ ಪೂಜಾ ಮೂರ್ತಿಗಳನ್ನು ಮಾಡಿಕೊಡುವುದರಿಂದ ಮೊದಲುಗೊಂಡು, ಓಣಿಯ ಮಹಿಳೆಯರ ಕಸೂತಿಗಾಗಿ ಚಿತ್ರ ಬರೆದು ಕೊಡುವವರೆಗೆ ಸಿದ್ಧಹಸ್ತವನ್ನು ಸಾಧಿಸಿದ್ದರು. ಇದನ್ನು ಗಮನಿಸಿದಾಗ ಚಿತ್ರಕಲೆ, ಮೂರ್ತಿಕಲೆಗಳು ಅವರೊಳಗೆ ಅಂತರ್ಗತವಾಗಿದ್ದ ಸಾಮರ್ಥ್ಯದ ಪ್ರತಿರೂಪವಾಗಿಯೇ ಕಾಣುತ್ತಿದ್ದವು.

ಇವರಿಗೆ ಚಿತ್ರಕಲಾ ವಿಷಯದಲ್ಲಿ ಪ್ರತಿಭೆಯಿದ್ದರೂ, ಸಂಬಂಧಿತ ಪ್ರತಿಭಾ

ಪರೀಕ್ಷೆಯ ಶುಲ್ಕ ಕಟ್ಟಿ ಪರೀಕ್ಷೆ ಬರೆಯುವ ಅನುಕೂಲ ಇರಲಿಲ್ಲ. ಕಾರಣವಾಗಿ ಸಾಮಾನ್ಯ ಶಿಕ್ಷಣದ ವೇಳಾಪಟ್ಟಿಯಲ್ಲಿನ ಡ್ರಾಯಿಂಗ್ ಅವಧಿಯ ತರಗತಿಯಲ್ಲಿ ಮಾತ್ರ ಚಿತ್ರಕಲಾ ಅಭ್ಯಾಸ ಮಾಡುವುದಾಗಿತ್ತು. ಪ್ರೌಢಶಾಲೆಯ ಉನ್ನತ ತರಗತಿಗಳಲ್ಲಿ ವ್ಯಾಸಾಂಗ ಮಾಡುತ್ತಿರುವಾಗ ವಿದ್ಯಾರ್ಥಿ ಬಿ.ಕೆ.ಯವರ ಚಿತ್ರ ಅಭ್ಯಾಸದ ಸಾಮರ್ಥ್ಯವು ಚಿತ್ರಕಲೆಯ ವಿಷಯ ಬೋಧಕರಾಗಿದ್ದ ಖ್ಯಾತ ಕಲಾವಿದ ಶ್ರೀ ಟಿ.ಪಿ.ಅಕ್ಕಿಯವರ ಗಮನಕ್ಕೆ ಬಂದದ್ದು ಒಂದು ಸುಗಳಿಗೆ, ಸುಯೋಗ ಎನ್ನಬಹುದು. ಶ್ರೀ ಟಿ.ಪಿ. ಅಕ್ಕಿಯವರ ಕಾಳಜಿಗೆ ಪ್ರೀತಿಗೆ ಪಾತ್ರರಾಗಿದ್ದು, ಆ ಸಂದರ್ಭದಲ್ಲಿ ಅವರ ಮಾರ್ಗದರ್ಶನದೊಂದಿಗೆ ಮುಂಬೈ ಸರಕಾರದ ವತಿಯಿಂದ ನಡೆಸುತ್ತಿದ್ದ ಎಲಿಮೆಂಟರಿ ಇಂಟರ್ ಮೀಡಿಯಟ್ ಡ್ರಾಯಿಂಗ್ ಪರೀಕ್ಷೆಗಳನ್ನು ಕಟ್ಟಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುತ್ತಾರೆ. ಈ ಸಂದರ್ಭದಲ್ಲಿ ಹೈಸ್ಕೂಲು ವಿದ್ಯಾಭ್ಯಾಸದ ಅಂತಿಮ ಘಟ್ಟ ಮೆಟ್ರಿಕ್ ಪರೀಕ್ಷೆಯನ್ನು ಉತ್ತಮ ದರ್ಜೆಯಲ್ಲಿ ಪಾಸುಮಾಡುತ್ತಾರೆ. ಮುಂದಿನ ವ್ಯಾಸಂಗಕ್ಕೆ ಕುಟುಂಬದಲ್ಲಿ ಪೂರಕ ವಾತಾವರಣ ಲಭಿಸಲಿಲ್ಲ. ಮೇಲಾಗಿ ಆ ದಿನಮಾನಗಳಲ್ಲಿ ಈ ರೀತಿಯ ಕುಟುಂಬಗಳಲ್ಲಿ ಮೆಟ್ರಿಕ್ ಪರೀಕ್ಷೆ ಪಾಸ್ ಎಂದರೆ ದುಡಿಮೆ ಮತ್ತು ಸಂಪಾದನಾ ಮೂಲವೆಂಬ ಭಾವನೆ. ತಂದೆಯವರಿಗೆ ದಲಾಲಿ ಅಂಗಡಿಯಲ್ಲಿ ಲೆಕ್ಕ ಬರೆಯುವ ನೌಕರಿಮಾಡಿ ಜೀವನ ನಡೆಸಿಕೊಂಡರೆ ಸಾಕೆಂಬ ಭಾವ. ಆದರೆ ತರುಣ ಬಿ.ಕೆ.ಯವರಿಗೆ ಗೆಳೆಯರಂತೆ ಕಾಲೇಜು ಸೇರಿ ಉನ್ನತ ವ್ಯಾಸಂಗವನ್ನು ಕೈಗೊಳ್ಳಬೇಕೆಂಬ ಆಸೆ. ತಾಯಿಗೂ ಸಹ ನಾಲ್ಕು ಜನರ ಮಕ್ಕಳಂತೆ ಮಗ ಓದಬೇಕೆಂಬ ಹಂಬಲವಿದ್ದರೂ ಕುಟುಂಬದ ಆರ್ಥಿಕ ಸಮಸ್ಯೆಯು ದೊಡ್ಡದಾಗಿ ಕಾಣುತ್ತಿತ್ತು. ಆದರೂ ಮನವರಿಕೆಯಿಂದ ತಂದೆಯ ಆಜ್ಞೆ ಸೋತು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಲೇಜು ಸೇರುತ್ತಾರೆ.

ಅಂದು ಕಾಲೇಜು ವ್ಯಾಸಂಗದಲ್ಲಿ ಕಲಾ ವಿಭಾಗಕ್ಕೆ ಪ್ರವೇಶ ಪಡೆದವರೆಲ್ಲರೂ ವಿಜ್ಞಾನ, ಗಣಿತ ವಿಷಯಗಳನ್ನು ಅಧ್ಯಯನ ಮಾಡಿ ತೇರ್ಗಡೆಯಾಗುವುದು ಕಡ್ಡಾಯವಾಗಿತ್ತು. ಹೀಗಿರುವಾಗ ಇವರು ಗಣಿತ ವಿಷಯದಲ್ಲಿ ನಪಾಸಾಗಿದ್ದರಿಂದ ಮುಂದೇನು? ಎಂಬ ಪ್ರಶ್ನೆ ದೊಡ್ಡದಾಗುತ್ತಿದ್ದಂತೆ ಶ್ರೀ ಟಿ. ಪಿ. ಅಕ್ಕಿಯವರ ಭೇಟಿ ದೈವ ಸಂಕಲ್ಪ ಮತ್ತು ಕೃಪೆಯಂತಿತ್ತು. ಆಕಸ್ಮಿಕ ಈ ಭೇಟಿಯು ಕುಶಲೋಪಾಚಾರಗಳೊಂದಿಗೆ ಕಾಲೇಜು ಶಿಕ್ಷಣದ ಫಲಿತಾಂಶದ ವಿಷಯ ಪ್ರಸ್ತಾಪವಾದಾಗ, ಅವರಿಗೂ ಬೇಸರವೆನಿಸುತ್ತದೆ. ಅಕ್ಕಿಯವರು ವಿದ್ಯಾರ್ಥಿ ಬಿ.ಕೆ. ಯವರ ಹಿನ್ನೆಲೆ ಅಷ್ಟು ಇಷ್ಟು ಅರಿತವರಾದ್ದರಿಂದ ಡ್ರಾಯಿಂಗ್ ಟೀಚರ್ಸ್ ಕೋರ್ಸಿಗೆ ಸೇರಲು ಸಲಹೆ ನೀಡುತ್ತಾರೆ. ಬಿ.ಕೆ.ಯವರು ಒಳ್ಳೆ ಫಲಿತಾಂಶ ಪಡೆದು ಶ್ರೇಷ್ಠ ಚಿತ್ರಕಲಾ ಶಿಕ್ಷಕ ಆಗಬಲ್ಲನೆಂಬ ನಂಬಿಕೆ ಅವರಿಗಿತ್ತು. ಮೇಲಾಗಿ ಅಕ್ಕಿಯವರು ಬಿ.ಕೆ. ಯವರನ್ನು ಕೇವಲ ವಿದ್ಯಾರ್ಥಿಯಾಗಿ ಕಂಡಿರಲಿಲ್ಲ. ಕುಟುಂಬ ಸದಸ್ಯನಂತೆ ಕಂಡಿದ್ದರು. ಈ ಸಾಮಿಪ್ಯದಲ್ಲಿಯೇ ಬಿ.ಕೆ.ಯವರಿಗೆ ಅಕ್ಕಿಯವರಿಂದ ಪಾಂಡಿಚೇರಿ ಆಶ್ರಮದ ಅರವಿಂದರ ಕುರಿತು ಓದಿನ ಸಂಪರ್ಕ–ಪ್ರಭಾವವಾಗುತ್ತದೆ. ಇದೇ ಸಂದರ್ಭದಲ್ಲಿ ಅವರಿಗೆ ಸಂಗೀತ ವಿಷಯದಲ್ಲಿ ಆಸಕ್ತಿ ಮೂಡುತ್ತದೆ. ಸ್ವಸಾಧನೆಯಿಂದ

ಸಂಗೀತದಲ್ಲಿಯೂ ಒಳ್ಳೆಯ ಪಟುತ್ವವನ್ನು ಹೊಂದುತ್ತಾರೆ. ಕುಟುಂಬದ ಪರಿಸ್ಥಿತಿಯ ಕಾರಣವಾಗಿ ಆ ವಿಷಯದಲ್ಲಿ ಹೆಚ್ಚಿನ ವ್ಯವಸ್ಥಿತ ಅಧ್ಯಯನ ಮಾಡಲಾಗಲಿಲ್ಲ. ಆ ವರ್ಷ ಡಿ.ಟಿ.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮರಾಗಿ ಪಾಸಾಗುತ್ತಾರೆ. ಇದರೊಂದಿಗೆ ಪದವಿಪೂರ್ವ ಶಿಕ್ಷಣದ ಗಣಿತ ವಿಷಯದಲ್ಲಿಯೂ ಪಾಸಾಗುತ್ತಾರೆ.

ಸ್ನಾತಕ ಪದವಿ ಅಧ್ಯಯನಕ್ಕೆ ಸೇರಬೇಕು. ಜೊತೆಗೆ ಚಿತ್ರಕಲೆ ಶಿಕ್ಷಣ ಮುಂದುವರೆಸಿಕೊಳ್ಳಬೇಕು ಎಂಬ ನಿರ್ಧಾರದೊಂದಿಗೆ ಸ್ನಾತಕ ಪದವಿಯಲ್ಲಿ ಅವರು ತರ್ಕಶಾಸ್ತ್ರ ಹಾಗೂ ತತ್ವಶಾಸ್ತ್ರ ವಿಷಯಗಳನ್ನು ಆಸಕ್ತಿಯಿಂದ ಆಯ್ಕೆಮಾಡಿಕೊಳ್ಳುತ್ತಾರೆ. ಆ ವಿಷಯ ಆಯ್ಕೆಮಾಡಿಕೊಂಡ ವಿದ್ಯಾರ್ಥಿ ಆ ಮಹಾವಿದ್ಯಾಲಯದಲ್ಲಿ ಅವರೊಬ್ಬರೇ ಆಗಿರುತ್ತಾರೆ. ಆದ್ದರಿಂದ, ವಿಷಯ ಬೋಧಕರು ಇವರನ್ನು ಕರೆಯಿಸಿ, ಒಬ್ಬರಿಗೆ ತರಗತಿ ಮಾಡಲು ಆಗದೆಂದು, ಬೇರೆ ವಿಷಯಕ್ಕೆ ವರ್ಗಾಯಿಸಿಕೊಳ್ಳಲು ಸೂಚಿಸುತ್ತಾರೆ. ವಿಧಿಯಿಲ್ಲದಂತಾಗಿ ತರ್ಕಶಾಸ್ತ್ರ, ತತ್ವಶಾಸ್ತ್ರದ ಸಂಬಂಧಿ ವಿಷಯದಂತೆ ತೋರುವ ಸಾಹಿತ್ಯ ವಿಷಯವು ಅವರ ಆಯ್ಕೆಯಾಗುತ್ತದೆ. ಉನ್ನತ ವ್ಯಾಸಂಗದಲ್ಲಿ ಕನ್ನಡ ಸಾಹಿತ್ಯ ಪ್ರೀತಿಯ ವಿಷಯವಾಗಿ ಪರಿಣಮಿಸಿತಾದರೂ ತತ್ವಶಾಸ್ತ್ರ, ತರ್ಕಶಾಸ್ತ್ರ, ಚಿತ್ರಕಲೆ, ಸಂಗೀತ ಆಸಕ್ತಿ ವಿಷಯಗಳು. ಸ್ನಾತಕ ವಿದ್ಯಾರ್ಥಿಯಾಗಿರುವಾಗಲೇ ಗದಗಿನ ಜೆ.ಟಿ.ಮಹಾವಿದ್ಯಾಲಯದ ವಿಜ್ಞಾನ ಪ್ರಯೋಗಾಲಯಕ್ಕೆ ಜಾಗತಿಕ ವಿಜ್ಞಾನಿಗಳ ಕಲಾಕೃತಿಗಳನ್ನು ರಚಿಸಿಕೊಟ್ಟು ತಮ್ಮ ಪ್ರತಿಭೆಯಿಂದ ಮೆರೆಯುತ್ತಾರೆ. ಅವು ಅನುಭವಿ ಕಲಾವಿದರ ಕುಂಚ ಫಲದಂತೆ ಕಂಗೊಳಿಸುತ್ತವೆ. ಈ ಅವಧಿಯ ಅವರ ಸ್ನಾತಕ ಶಿಕ್ಷಣ, ಫಲಿತಾಂಶಗಳು ಎಲ್ಲವೂ ಒಂದು ರೀತಿಯ ಪವಾಡಗಳೇ ಎನಿಸಿದ್ದವಂತೆ. ಹಲವು ಸಮಸ್ಯೆಗಳಲ್ಲಿಯೇ; ಶ್ರದ್ಧೆಯ ಅಭ್ಯಾಸ, ಶಿಕ್ಷಕರ ಮತ್ತು ಗೆಳೆಯರ ಪ್ರೋತ್ಸಾಹದಿಂದ ಸ್ನಾತಕ ಪದವಿ ಶಿಕ್ಷಣವನ್ನು ಪೂರೈಸುತ್ತಾರೆ. ಕುಟುಂಬದ ಸತ್ಪರಂಪರೆ ಮತ್ತು ಬಹು ವಿಷಯ ಕಲೆಗಳಲ್ಲಿ ಗೌರವದ ಆಸಕ್ತಿಗಳೊಂದಿಗೆ, ಗುರುವೃಂದ, ವಿದ್ಯಾರ್ಥಿವೃಂದ ಹಾಗೂ ಆಡಳಿತ ಮಂಡಳಿಗೂ ಮೆಚ್ಚಿಗೆಯ ವಿದ್ಯಾರ್ಥಿಯಾಗಿ, ಪದವಿ ವ್ಯಾಸಂಗದ ಕೊನೆಯ ವರ್ಷ (1964)ದಲ್ಲಿ ಮಹಾವಿದ್ಯಾಲಯದ ವರ್ಷದ ಅತ್ಯುತ್ತಮ ವಿದ್ಯಾರ್ಥಿಯೆಂಬ ಪಟ್ಟವನ್ನು ಸಂಪಾದಿಸಿದ್ದರು.

ಪದವಿಯ ಸಂದರ್ಭದ ವಿದ್ಯಾಗುರುಗಳಾಗಿದ್ದ, ಡಾ. ಎಂ. ಎಸ್. ಲಠ್ಠೆಯವರ ಸಲಹೆ ಪ್ರೋತ್ಸಾಹದಿಂದ ಸ್ನಾತಕೋತ್ತರ ವ್ಯಾಸಂಗ ಕೈಗೊಳ್ಳುವ ನಿರ್ಣಯಮಾಡುತ್ತಾರೆ. ಸ್ನಾತಕೋತ್ತರ ಅಧ್ಯಯನಕ್ಕೆ ಬಡತನವನ್ನು ಸಂಬಾಳಿಸುವ ಬಲಗಳಿದ್ದರೂ ಹೊಸದೊಂದು ಸಮಸ್ಯೆ ಉಲ್ಬಣಿಸುತ್ತದೆ. ಹತ್ತಿರದ ಬಂಧುಗಳಲ್ಲಿ ಒಬ್ಬರು ಇವರನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ಹೋಗದಂತೆ ತಡೆಯಲು ತಂದೆಯಿಂದ ಅಡ್ಡಿ ಉಂಟುಮಾಡುತ್ತಾರೆ. ಅಂತಹ ಸಮಸ್ಯೆಗಳು ಹೇಗೆ ಉದ್ಭವಿಸಿದ್ದವೋ ಹಾಗೆ ಉಪಾಯದಿಂದ ಉಪಶಮನ ಮಾಡಿ, ಪರಿಹರಿಸಿಕೊಳ್ಳುತ್ತಾರೆ. ತಂದೆಗಿಂತ ತಾಯಿಯ ಕರಳು ಕರಗಿ ಅವರ ಉನ್ನತ ವ್ಯಾಸಂಗಕ್ಕೆ ಒಪ್ಪಿಗೆಯೂ ದೊರೆಯುತ್ತದೆ. ಆ ಸಂದರ್ಭದಲ್ಲಿ ಇವರು ನಿರ್ವಹಿಸುವ ಕುಟುಂಬದ ಕೆಲ ಕೆಲಸಗಳು ಇವರ ತಾಯಿ

ನಿಭಾಯಿಸುವದರೊಂದಿಗೆ ಬೆಳಿಗ್ಗೆ ಬೇಗ ಇವರಿಗೆ ಬುತ್ತಿಯನ್ನು ಸಿದ್ಧಮಾಡಿ ಧಾರವಾಡ ಬಸ್ಸಿಗೆ ಇಡುವ ಕೆಲಸವೂ ಹೊಸದಾಗಿ ಸೇರುತ್ತದೆ. ಇದಕ್ಕೆ ಪರಿಹಾರವಾಗಿ ಧಾರವಾಡದಲ್ಲಿ ಯಾವುದಾದರೊಂದು ಉದ್ಯೋಗ ಸಂಪಾದಿಸಿ ಈ ಸ್ಥಿತಿಯನ್ನು ಪರಿಹರಿಸಿಕೊಳ್ಳುವುದೆಂಬ ಉಪಾಯದಿಂದ ತೆರಳುತ್ತಾರೆ. ಆದರೆ ತರಗತಿಗಳ ವೇಳಾಪಟ್ಟಿಗಳಿಗೆ ಹೊಂದಿಕೆಯಾಗುವಂತಹ ಉದ್ಯೋಗ ದೊರೆಯದಕ್ಕೆ ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಬುತ್ತಿ ಬಂದರೆ ಊಟ, ಇಲ್ಲದಿದ್ದರೆ ತಣ್ಣೀರು ಬಟ್ಟೆ ಎಂಬ ಸ್ಥಿತಿಯಲ್ಲಿ ಶಿಕ್ಷಣವನ್ನು ಮುಂದುವರೆಸುತ್ತಾರೆ. ಕೆಲವೊಮ್ಮೆ ಬುತ್ತಿ ಬಾರದಿದ್ದಾಗ ಇವರು ಯಾರನ್ನು ಇವರಾಗಿಯೇ ಬೇಡದಿದ್ದರೂ ಕಾಳಜಿಯಿಂದ ವಿಚಾರಿಸಿ ಕರೆದುಕೊಂಡು ಊಟಮಾಡಿಸುವ ಗೆಳೆಯರು ಇವರಿಗಿದ್ದರು. ಇವರ ಸ್ವಭಾವ ಇಂತಹ ಸ್ನೇಹ ಸಂಬಂಧಗಳಿಗೆ ಕಾರಣವಾಗಿರುತ್ತಿತ್ತು. ಈ ಸಂದರ್ಭದ ತಮ್ಮ ಗೆಳೆಯರ ಸಹಕಾರವನ್ನು ಅವರು ಗೌರವದಿಂದ ಸ್ಮರಿಸುತ್ತಾರೆ. ಉಪವಾಸ-ತಪಸ್ಸು-ಸಂಕಷ್ಟ-ಗೆಳೆಯರ ಅಭಿಮಾನದ ಬಲದಿಂದ 1966ರಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಶಸ್ತಿಯೊಂದಿಗೆ ಪ್ರಥಮ ಶ್ರೇಣಿಯಲ್ಲಿ ಪೂರೈಸುತ್ತಾರೆ. ಈ ಎರಡು ವರ್ಷಗಳ ಸ್ನಾತಕೋತ್ತರ ವ್ಯಾಸಂಗದ ಅವಧಿಯಲ್ಲಿ ವ್ಯಾಸಂಗದೊಂದಿಗೆ ಚಿತ್ರಕಲೆಗೆ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸಿ ಅಭಿಮಾನಿಗಳನ್ನು ಸಂಪಾದಿಸುತ್ತಾರೆ. ಅನೇಕ ಹಿರಿ, ಕಿರಿ ಸಾಹಿತಿಗಳ ಹೊತ್ತಿಗೆಗಳಿಗೆ ಮುಖಪುಟವನ್ನು ರಚಿಸಿಕೊಡುತ್ತಾರೆ. ಈ ಅವಧಿಯಲ್ಲಿ (1966) ಜೆ.ಡಿ.ಇನ್ ಮಾಡೆಲಿಂಗ್ ಕೋರ್ಸ್ ಅನ್ನು ರಾಜ್ಯಕ್ಕೆ ಪ್ರಥಮರಾಗಿ ತೇರ್ಗಡೆಯಾಗುತ್ತಾರೆ.

ಸ್ನಾತಕೋತ್ತರ ಉತ್ತಮ ಫಲಿತಾಂಶದೊಂದಿಗೆ ಕಾಲೇಜುವೊಂದರಲ್ಲಿ ತೆರವಾದ ಹುದ್ದೆಗೆ ಅರ್ಜಿ ಸಲ್ಲಿಸಲು ಹೋದಾಗ ನೇರವಾಗಿ ಆ ಹುದ್ದೆ ಬೇರೊಬ್ಬರಿಗೆ ಮೀಸಲಾಗಿದೆ ಎಂಬ ಮಾತು ತಿಳಿದು ಬರುತ್ತದೆ. ಮುಂದಿನ ವಿದ್ಯಾಭ್ಯಾಸಕ್ಕೆ ಮನೆಯಲ್ಲಿ ಅನುಕೂಲವಿರದ ಕಾರಣ, ಕುಟುಂಬದ ಸ್ಥಿತಿಗೆ ಅನುಕೂಲವಾದ ಹೈಸ್ಕೂಲವೊಂದರಲ್ಲಿ ಕೆಲಸಕ್ಕೆ ಸೇರಲಿಚ್ಚಿಸುತ್ತಾರೆ. ವಿದ್ಯಾಗುರುಗಳಾದ ಡಾ॥ ಆರ್.ಸಿ.ಹಿರೇಮಠರಿಗೆ ಈ ವಿಷಯ ತಿಳಿದಾಗ 'ಪ್ರತಿಭಾಸಂಪನ್ನರನ್ನು ಸೂಕ್ತ ಸ್ಥಳದಲ್ಲಿ-ಸೂಕ್ತ ಕಾರ್ಯ- ಹುದ್ದೆಗಳಿಗೆ ಗೊತ್ತುಮಾಡುವುದೇ ಅಭಿವೃದ್ಧಿ ಎಂದು ಭಾವಿಸಿದ' ಅವರು ಇವರ ನಿರ್ಣಯವನ್ನು ಬಿಟ್ಟು ತಮ್ಮ ಮಾರ್ಗದರ್ಶನದಲ್ಲಿ ಶಿಷ್ಯವೇತನದೊಂದಿಗೆ ಸಂಶೋಧನೆಗೆ ಸೇರಿಕೊಳ್ಳಲು ಸೂಚಿಸಿ; 'ಕನ್ನಡ ಸಾಹಿತ್ಯದಲ್ಲಿ ಲಲಿತಕಲೆಗಳು' ಎಂಬ ವಿಷಯ ಗೊತ್ತುಮಾಡಿ ಪ್ರೋತ್ಸಾಹಿಸುತ್ತಾರೆ. ಪ್ರೊ॥ ಆರ್.ಸಿ.ಅವರ ಸಲಹೆಯಂತೆ ಸಂಶೋಧನೆಗೆ ಸೇರಿಕೊಂಡು ಆ ವಿಷಯಕ್ಕೆ ಬೇಕಾದ ಸಂಪನ್ಮೂಲ ಕ್ರೋಢಿಕರಣ, ಆಕರ ಸಂಗ್ರಹದೊಂದಿಗೆ ಶಾಸನ ಡಿಪ್ಲೋಮಕ್ಕೆ ಸೇರಿಕೊಂಡು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಾರೆ. ಸಂಶೋಧನೆಯಲ್ಲಿ ನಿರತರಾಗಿರುವಾಗಲೇ 1967ರಲ್ಲಿ ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ನೇಮಕಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಡಾ॥ ಆರ್.ಸಿ.ಯವರು ಆ ವೃತ್ತಿಯನ್ನು ನಿರ್ವಹಿಸಲು ಪ್ರೋತ್ಸಾಹವನ್ನು ತೋರುತ್ತಾರೆ.

## ಆ. ವೃತ್ತಿ ಜೀವನ

ಪ್ರತಿಷ್ಠಿತ ಸಂಸ್ಥೆಯಲ್ಲಿ ಅಧ್ಯಾಪಕ ಹುದ್ದೆ ಒಂದೆಡೆ ಸುಸಂಧಿಯಾಗಿದ್ದರೂ, ನಾಡಿನ ಘನ ವಿದ್ವಾಂಸರ ಮಾರ್ಗದರ್ಶನದಲ್ಲಿ ಕೈಗೊಂಡ ಸಂಶೋಧನೆಗೆ ಪೂರಕವಾಗುವ ಉನ್ನತ ಕಲಾ ವ್ಯಾಸಂಗ ಪೂರೈಸಲು, ಕ್ಷೇತ್ರಕಾರ್ಯ ಮಾಹಿತಿ ಸಂಗ್ರಹಿಸಲು ಸಮಯ ಅನಾನುಕೂಲಗಳು ಮತ್ತೊಂದೆಡೆ ಬಹುಮುಖ ಪ್ರತಿಭೆಯ ಬಿ.ಕೆ.ಯವರಿಗೆ ಬದುಕಿನುದ್ದಕ್ಕೂ ಆಯ್ಕೆಗಿಂತ ಹೊಂದಾಣಿಕೆ ಅನಿವಾರ್ಯವಾದಂತಿತ್ತು. ಏತನ್ಮಧ್ಯೆ ಕಲಾ ವ್ಯಾಸಂಗವನ್ನು ಪೂರೈಸುತ್ತಾರೆ.[1] ವೃತ್ತಿ ಕ್ಷೇತ್ರದ ರಾಜಕೀಯ–ರಾಜಕಾರಣದಿಂದ ದೂರ ಬದುಕುವ ಪ್ರವೃತ್ತಿಯವರಾಗಿದ್ದರೂ ವೃತ್ತಿ ಜೀವನದ ಆರಂಭದ ದಿನಗಳು ಸಂತೋಷ–ಬೇಸರಗಳ ಮಿಶ್ರಣದಂದ ಕೂಡಿದ್ದವು. ವೃತ್ತಿ ಬದ್ಧತೆಯೊಂದಿಗೆ ಕಲಾಸಂವೇದನ ಪ್ರೇರಣೆ, ಸಾಂದರ್ಭಿಕ ಚಿತ್ರಕಲಾ ಪ್ರದರ್ಶನಗಳು, ಮುಂದೆ ಮನೆಯಲ್ಲಿ ಮದುವೆ ಪ್ರಸ್ತಾಪವಾಗಿ, ರಾಣೆಬೆನ್ನೂರಿನ ಹಿರೇಮಠ ಮನೆತನದ ಸೌ॥ ಶಕುಂತಲ ಅವರೊಂದಿಗೆ ಚತುರ್ಭುಜರಾಗುತ್ತಾರೆ. ಅವರ ದಾಂಪತ್ಯದಲ್ಲಿ ಮಗ ಅರವಿಂದ, ಮಗಳು ಪ್ರತಿಭಾರ ಪ್ರವೇಶವಾಗುತ್ತದೆ. ಬಾಗಲಕೋಟೆಯ ತಮ್ಮ ಸಂಸಾರ ಮತ್ತು ಗದಗಿನಲ್ಲಿ ತಂದೆ ತಾಯಿ ಸಹೋದರರು ಅಲ್ಲೊಂದು ಸಂಸಾರ ಹೀಗೆ, ಎರಡು ಕುಟುಂಬಗಳ ನಿರ್ವಹಣೆ ಇವರ ಜವಾಬ್ದಾರಿಯಾಗುತ್ತದೆ. ಇವುಗಳೊಂದಿಗೆ ಮಹಾವಿದ್ಯಾಲಯದ ವಿಸ್ತರಣಾ ಕಾರ್ಯಗಳ ಜವಾಬ್ದಾರಿಗಳು ಇತ್ಯಾದಿಗಳ ಒತ್ತಡದಿಂದ ಪಿಎಚ್.ಡಿ. ಅಧ್ಯಯನಕ್ಕೆ ಬೇಕಾದ ವಿಶೇಷ ಶ್ರಮ, ಶ್ರದ್ಧೆ, ವೆಚ್ಚ, ತೋರಲಾಗದ ಕಾರಣವಾಗಿ ತಾತ್ಕಾಲಿಕವಾಗಿ ಕೈಬಿಡುವಂತಾಗುತ್ತದೆ.

ಕಲಾ ಕ್ಷೇತ್ರದ ಅಕಾಡೆಮಿಕ್ ನೆಲೆಯಲ್ಲಿ ಅವರದೇ ಆದ ಛಾಪು ಮೂಡಿಸಿ, ಕಲೆಯಲ್ಲಿ ಉನ್ನತ ಹುದ್ದೆಗೆ ಅರ್ಹತೆ ಸಂಪಾದಿಸಿದ್ದ ಬಿ.ಕೆ.ಯವರು, ಕಲೆ ಮತ್ತು ಕಲಾಸಾಹಿತ್ಯದ ವಾತಾವರಣಗಳಿದ್ದರೆ ವಿಶೇಷ ಅಧ್ಯಯನಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆಂದು ಹಂಬಲಿಸಿ, ಆ ಸಂದರ್ಭದಲ್ಲಿ ದಾವಣಗೆರೆಯ ಕಲಾ ಸಂಸ್ಥೆಯ ಪ್ರಾಚಾರ್ಯ ಹುದ್ದೆಗೆ ಅರ್ಜಿ ಸಲ್ಲಿಸಿ ಸಂದರ್ಶನಕ್ಕೆ ಹಾಜರಾಗುತ್ತಾರೆ. ಯೋಗ್ಯ ಸಮರ್ಥ ಅಭ್ಯರ್ಥಿಯಾಗಿದ್ದರೂ ಹುದ್ದೆ ಕೈತಪ್ಪುತ್ತದೆ. ಮುಂದೆ ಸಾಹಿತ್ಯದ ಅಧ್ಯಾಪನ, ಅಧ್ಯಯನಗಳು ಅಕಾಡೆಮಿಕ್ ನೆಲೆಗಳಾಗುತ್ತವೆ. ಇವರ ಅಧ್ಯಾಪಕ ವೃತ್ತಿಯ ಆರಂಭದ ದಿನಗಳಲ್ಲಿ, ವೃತ್ತಿನಿರತ ಪ್ರೌಢಶಾಲಾ ಶಿಕ್ಷಕರಿಗೆ ಸರಕಾರವು ಡೆಪ್ಯೂಟೇಷನ್ ಆಧಾರದ ಮೇರೆಗೆ ಪದವಿ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ಕಲ್ಪಿಸಲಾಗಿತ್ತು. ತರಗತಿಯಲ್ಲಿ ಇವರ ಪ್ರಾಯಕ್ಕಿಂತ ಹಿರಿಯರು ವಿದ್ಯಾರ್ಥಿಗಳಾಗಿ ಇರುತ್ತಿದ್ದರು. ಹೀಗಾಗಿ ಇವರ ಮೊದಲ ಬ್ಯಾಚಿನ ವಿದ್ಯಾರ್ಥಿಗಳು, ಆ ವಿದ್ಯಾರ್ಥಿಗಳ ಮಕ್ಕಳು ಮತ್ತು ಮೊಮ್ಮಕ್ಕಳು– ಹೀಗೆ ಒಂದೇ ಕುಟುಂಬದ ಮೂರು ತಲೆಮಾರಿನವರು ಬಿ.ಕೆ.ಯವರಿಗೆ ಶಿಷ್ಯವೃಂದವಾಗಿರುವುದುಂಟು. ಅಪಾರ ಶಿಷ್ಯಬಳಗ ಅವರದು.

ಡಾ॥ ಬಿ. ಕೆ. ಯವರ ತರಗತಿಯ ಉಪನ್ಯಾಸಗಳು ವೈವಿಧ್ಯ ಆಕರಗಳೊಂದಿಗೆ ಗಂಭೀರವಾಗಿ ನೆರವೇರುತ್ತಿದ್ದವು. ಅಕಾಡೆಮಿಕ್ ಶಿಸ್ತಿನೊಂದಿಗೆ ವಿಷಯ ನಿಷ್ಠತೆಯ

ಪ್ರಾಧಾನ್ಯತೆಯೊಂದಿಗೆ ಸಂಶೋಧನಾತ್ಮಕ ಶೈಲಿಗಳಿಂದಲೇ ಬೆಳೆಯುತ್ತಿದ್ದವು. ಈ ರೀತಿ ತರಗತಿ ನಿಭಾಯಿಸಬೇಕೆಂದು ಅವರ ಗುರುಗಳಾದ ಪ್ರೊ॥ಆರ್.ಸಿ.ಹಿರೇಮಠರ ಸೂಚನೆಯಾಗಿತ್ತಂತೆ. ಅದನ್ನು ಅವರು ಶ್ರದ್ಧೆಯಿಂದ ವೃತ್ತಿಯುದ್ದಕ್ಕೂ ಪಾಲಿಸಿಕೊಂಡು ಬಂದಿದ್ದಾರೆ. ಡಾ॥ಬಿ.ಕೆ.ಯವರ ವೃತ್ತಿ ನಿರ್ವಹಣೆಯಲ್ಲಿ ಸಂಶೋಧನೆ ಮತ್ತು ಸಂಶೋಧನಾ ಮಾರ್ಗದರ್ಶನವು ಒಂದು ಅಪರೂಪದ ಅನುಕರಣೀಯ ಹಾಗೂ ಗೌರವದ ಸನ್ನಿವೇಶವಾಗಿದೆ. ನಿರಂತರ ಅಧ್ಯಯನ ಶೀಲರಾಗಿದ್ದ ಇವರು ಪ್ರೊ. ಎಂ. ಎಂ. ಕಲಬುರ್ಗಿಯವರ ಮಾರ್ಗದರ್ಶನದಲ್ಲಿ ಪುನಃ ಪಿಎಚ್.ಡಿ.ಗೆ ನೋಂದಣಿ ಮಾಡಿಕೊಂಡು, 'ಕನ್ನಡ ಹಸ್ತಪ್ರತಿಗಳ – ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಆಳವಾದ ಅಧ್ಯಯನವನ್ನು ಕೈಗೊಂಡು 1992ರಲ್ಲಿ ಪಿಎಚ್.ಡಿ. ಪದವಿಯನ್ನು ಪೂರೈಸುತ್ತಾರೆ. ಅವರ ಈ ಅಧ್ಯಯನ ಕನ್ನಡ ಸಂಶೋಧನೆ ಚರಿತ್ರೆ ಮತ್ತು ಕನ್ನಡ ಹಸ್ತಪ್ರತಿ ಅಧ್ಯಯನ ಚರಿತ್ರೆಯಲ್ಲಿ ಒಂದು ಮೈಲುಗಲ್ಲು ಆಗಿದೆ. ಕನ್ನಡ ಸಂಶೋಧನಾ ಭೂಗೋಳದಲ್ಲಿ ಉಪೇಕ್ಷಿತ ವಿಷಯಗಳ ಮೇಲೆ ಬಹು ಆಸಕ್ತಿಯನ್ನು ಹೊಂದಿದ್ದ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಮತ್ತು ಕನ್ನಡ ವಿಶ್ವವಿದ್ಯಾಲಯ ಹಂಪಿ, ಈ ಉಭಯ ವಿಶ್ವವಿದ್ಯಾಲಯಗಳ ಸಂಶೋಧನಾ ಮಾರ್ಗದರ್ಶನತ್ವ ಹೊಂದಿ ಹಲವು ಉಪೇಕ್ಷಿತ ವಿಷಯಗಳ ಮೇಲೆ ಸಂಶೋಧನಾ ಮಾರ್ಗದರ್ಶನ ಮಾಡಿಸಿದ್ದು ಗಮನಾರ್ಹ ಸಂಗತಿಯಾಗಿದೆ.[2]

ಇವರ ನಿವೃತ್ತಿ ಸಂದರ್ಭದಲ್ಲಿ ಬಾಗಲಕೋಟ ಬಸವೇಶ್ವರ ವಿದ್ಯಾವರ್ಧಕ ಸಂಘವು ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಕನ್ನಡ ಸ್ನಾತಕೋತ್ತರ ವಿಭಾಗವನ್ನು 1998-99ರ ಸಾಲಿನಲ್ಲಿ ಆರಂಭಿಸುತ್ತದೆ. ಈ ವಿಭಾಗಕ್ಕೆ ಡಾ॥ ಬಿ.ಕೆ. ಹಿರೇಮಠರು ಸಂಸ್ಥಾಪಕ ಮುಖ್ಯಸ್ಥರಾಗುತ್ತಾರೆ. ನಿವೃತ್ತಿ ನಂತರ ಹತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತಾರೆ. ಅವರ ಸಾರಥ್ಯದಲ್ಲಿ ವಿಭಾಗವು ಕೆಲವೇ ವರ್ಷಗಳಲ್ಲಿ ಗಮನಾರ್ಹ ಕೇಂದ್ರವಾಗಿ ಬೆಳೆಯುತ್ತದೆ. ಡಾ॥ ಬಿ. ಕೆ. ಯವರ ಅಮೂಲ್ಯ ಶೈಕ್ಷಣಿಕ ಸೇವೆಯನ್ನು ಪರಿಗಣಿಸಿ ಕರ್ನಾಟಕ ಘನ ಸರಕಾರವು 2012ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದು ಕರ್ನಾಟಕ ಶಿಕ್ಷಣ ಚರಿತ್ರೆಯಲ್ಲಿಯ ಅವರ ಸಾರ್ಥಕ ಸೇವೆಯನ್ನು ದಾಖಲಿಸಿದಂತಾಗಿದೆ. ಅಪಾರ ವಿದ್ಯಾರ್ಥಿ ಮತ್ತು ಅಭಿಮಾನಿ ಬಳಗವನ್ನು ಹೊಂದಿದ ಇವರಿಗೆ "ನಿಜದ ನೆಲೆ" ಎಂಬ ಮೌಲಿಕ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದ್ದಾರೆ.

**ಇ. ಸಾಹಿತ್ಯಿಕ ಕೊಡುಗೆ**

ಡಾ॥ ಬಿ.ಕೆ.ಹಿರೇಮಠರು ಲೇಖನಿಯನ್ನು ಜವಾಬ್ದಾರಿಯೆಂದು ದುಡಿಸಿದವರು. ಅವರ ಒಟ್ಟು ಸಾಹಿತ್ಯವನ್ನು ಸಂಶೋಧನೆ, ಸಂಪಾದನೆ, ಕಲಾಸಾಹಿತ್ಯ, ಅನುವಾದ, ಹಾಗೂ ಸಾಂದರ್ಭಿಕ ಬರಹಗಳೆಂದು ಗುರುತಿಸಬಹುದು. ಯಾವುದೇ ಪೂರ್ವಗ್ರಹ ಪೀಡನಕ್ಕೆ ಒಳಗಾಗದೆ ತೂಗಿ ಸಮರ್ಥಿಸಿ, ವಿಶಿಷ್ಟತೆ – ವಿಶೇಷತೆಗಳೊಂದಿಗೆ ಮೈದೆಳೆಯುವುದು ಇವರ ಬರಹದ ವೈಶಿಷ್ಟ್ಯ .

**ಸಂಶೋಧನೆ:** ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಹಳೆಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಹಾಗೂ ಶರಣ ಪರಂಪರೆ ಕುರಿತ ಅಧ್ಯಯನಗಳು ಇವರ ಸಂಶೋಧನಾ ಕ್ಷೇತ್ರಗಳಾಗಿವೆ. ಡಾ॥ ಬಿ.ಕೆ.ಯವರು ಕೈಗೊಂಡ ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಯು ಕರ್ನಾಟಕ ಸಂಶೋಧನಾ ಕ್ಷೇತ್ರದಲ್ಲಿ ವಿಶಿಷ್ಟ ಮೈಲುಗಲ್ಲು ಎಂಬುದು ಈಗಾಗಲೇ ಸಂಶೋಧನಾ ಸಮೀಕ್ಷೆಗಳು ಗುರುತಿಸಿವೆ. ಪ್ರೊ. ಎಂ.ಎಂ.ಕಲಬುರ್ಗಿಯವರು ಇವರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ ಹೊತ್ತಿಗೆಯನ್ನು ಅವಲೋಕಿಸುತ್ತಾ; "ಈ ಬಗೆಯ, ಈ ವ್ಯಾಪ್ತಿಯ ಅಧ್ಯಯನ ಭಾರತದ ಬೇರೆ ಭಾಷೆಗಳಲ್ಲಿ ಜರುಗಿದುದು ಸಂದೇಹ"[3] ಮತ್ತು "ಯಾವ ಕಾಲಕ್ಕೂ ಸಂದರ್ಭಗ್ರಂಥವೆನಿಸಲಿರುವ ಈ ಮೌಲಿಕ ಕೃತಿ ರಚನೆಗಾಗಿ ಡಾ॥ ಬಿ.ಕೆ.ಹಿರೇಮಠರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ"[4] ಎಂದಿರುವಲ್ಲಿ ಈ ಪ್ರಯತ್ನದ ಮೌಲಿಕತೆ ಮತ್ತು ಸಾರ್ವಕಾಲಿಕತೆಯು ಸ್ಪಷ್ಟವಾಗುತ್ತದೆ. ಹತ್ತು ಅಧ್ಯಾಯಗಳಲ್ಲಿ ಬೆಳೆದು ನಿಂತ ಈ ಅಧ್ಯಯನದ ಪ್ರತಿ ಅಧ್ಯಾಯವು ಹಸ್ತಪ್ರತಿಯನ್ನು ಅನ್ವಯಿಕ ನೆಲೆಯಲ್ಲಿ ವಿಶ್ಲೇಷಣೆಗೆ ಗುರಿಪಡಿಸಿದೆ ಮತ್ತು ಇದೇ ಈ ಅಧ್ಯಯನದ ವೈಶಿಷ್ಟ್ಯವಾಗಿದೆ.

ಕನ್ನಡ ಹಸ್ತಪ್ರತಿಶಾಸ್ತ್ರದ ವೈಜ್ಞಾನಿಕ ಪರಿಕಲ್ಪನೆಗಳೊಂದಿಗೆ ಸ್ಪಷ್ಟ ರೂಪುರೇಷೆಗಳನ್ನು ಕಟ್ಟಿಕೊಟ್ಟದ್ದು ಡಾ॥ಬಿ.ಕೆ.ಯವರ ಈ ಅಧ್ಯಯನವೇ. ಇಲ್ಲಿ ಹಸ್ತಪ್ರತಿಯ ಮೂಲಭೂತ ಪರಿಕಲ್ಪನೆಗಳ ಸಹಜ, ವಿಶೇಷ ಸ್ವರೂಪವನ್ನು ಗುರುತಿಸುತ್ತಾ, ಅದರ ವೈವಿಧ್ಯಮಯ ಸಂಪತ್ತಿನ ವ್ಯಾಪ್ತಿ ಮತ್ತು ಕ್ಷೇತ್ರಗಳ ಮರು ದರ್ಶನಗೈಯುತ್ತಾರೆ. ಹಸ್ತಪ್ರತಿ–ಕಾಗದ ಪ್ರತಿಗಳ ಕಾಲ ನಿರ್ಧರಣೆಯು ಕನ್ನಡ ಪರಂಪರೆಯ ಕಾಲಗರ್ಭದ ಎರಡು ಸಾಂಸ್ಕೃತಿಕ ಲೋಕಗಳ ಪರಿಧಿಯನ್ನು ಕಟ್ಟಿಕೊಡುತ್ತಾರೆ. ಹಸ್ತಪ್ರತೀಕರಣದ ಪರಿಕರಗಳನ್ನು ವಿಭಜಿಸುವಲ್ಲಿ ಪರಿಭಾಷೆಯನ್ನು ಬಳಸುವುದು, ಅಗತ್ಯವಾದ ವಿಶ್ಲೇಷಣೆ– ನಿರೂಪಣೆಯನ್ನು ಧಕ್ಕಿಸಿಕೊಂಡಿರುವುದು ವಿಶಿಷ್ಟವಾದದ್ದಾಗಿದೆ. ಹಸ್ತಪ್ರತಿ ವಿನ್ಯಾಸಕಾರರು, ಲಿಪಿಕಾರರನ್ನು, ಪ್ರತೀಕರಣ ಕುರಿತಾಗಿ, ಅವರು ಕೈಗೊಳ್ಳುವ ವಿಶ್ಲೇಷಣೆಯು, ಕನ್ನಡ ಸಂಶೋಧನಾ ಚರಿತ್ರೆಯಲ್ಲಿ ನೂತನವೆನಿಸಿದೆ. ಆದ್ದರಿಂದ ಪ್ರೊ. ಎಂ.ಎಂ.ಕಲಬುರ್ಗಿಯವರ ಅವಲೋಕನ "... ನಮಗೆ ಗೊತ್ತಿಲ್ಲದ ಅನೇಕ ಅಂಶಗಳನ್ನು ಕಣ್ಣಿಗೆ ಕಟ್ಟುತ್ತದೆ"[5] ಎಂದಿರುವುದು ಗಮನಾರ್ಹ. ಈ ಭಾಗದಲ್ಲಿ ಗುರುವರ್ಗ, ಶಿಷ್ಯವರ್ಗ ಪರಂಪರೆಯೊಂದಿಗೆ ಬರಹಗಾರ್ತಿಯರತ್ತ ಬೆಳಕು ಚೆಲ್ಲುವುದು ಇವರ ಅಧ್ಯಯನದ ವೈಶಾಲ್ಯತೆಗೆ ಹಿಡಿದ ಕನ್ನಡಿಯಾಗುತ್ತದೆ. ಹಸ್ತಪ್ರತಿ ಪೋಷಣೆ– ಪ್ರಸರಣ ಮತ್ತು ಪೋಷಣೆಯಲ್ಲಿ ಸಮುದಾಯ ಬಲವನ್ನು ರಾಜ, ಧರ್ಮ, ಪ್ರಜಾ ಶಕ್ತಿಗಳಾಗಿ ವಿಸ್ತರಿಸಿದ್ದು, ಹಸ್ತಪ್ರತಿಗೆ ಅನ್ವಯಿಕ ಕ್ಷೇತ್ರಗಳ ಸಂಬಂಧವನ್ನು ಬಲವಾಗಿ ಬೆಸೆಯುವಲ್ಲಿ ಸಾಂಸ್ಕೃತಿಕ ವೈವಿಧ್ಯತೆಯನ್ನು ಸ್ಪರ್ಶಿಸಿಕೊಂಡದ್ದು, ಅಧ್ಯಯನದ ವೈಶಾಲ್ಯತೆಯನ್ನು ವಿಸ್ತರಿಸಿದೆ. ವಿಷಯಕ್ಕೆ ನ್ಯಾಯ ಒದಗಿಸುತ್ತಲೆ, ಹಸ್ತಪ್ರತಿ ಅಧ್ಯಯನದ ಕಡಲ ವಿಸ್ತಾರವನ್ನು ದರ್ಶಿಸುತ್ತದೆ.

ಹಸ್ತಪ್ರತಿ ಕಲಾ ವಿನ್ಯಾಸವೆಂಬ ಭಾಗವಂತೂ ಆರ್ಯ–ದ್ರಾವಿಡ ನಾಗರಿಕತೆ

ನೆಲೆಯಲ್ಲಿ ಬೆಳೆಸಲು ನಿರ್ಣಯಿಸಿದ್ದು ಅವರ ಹಸ್ತಪ್ರತಿ ಅಧ್ಯಯನದ ವಿಷಯ ಬದ್ಧತೆ, ಸಂಶೋಧನಾ ಪ್ರಜ್ಞೆ ಮತ್ತು ಪಾಂಡಿತ್ಯವನ್ನು ಅರಿವಿಗೆ ತರುತ್ತದೆ. ಆದ್ದರಿಂದಲೇ ಇಲ್ಲಿಯ ಪ್ರಯತ್ನವನ್ನು ಪ್ರೊ. ಎಂ.ಎಂ. ಕಲುಬುರ್ಗಿಯವರು "...ಹಸ್ತಪ್ರತಿಗಳ ಕಲಾವಿನ್ಯಾಸ, ಸ್ವತಃ ಪ್ರಥಮ ದರ್ಜೆಯ ಚಿತ್ರಕಲಾವಿದರಾಗಿರುವ ಡಾ|| ಬಿ.ಕೆ. ಹಿರೇಮಠ ಅವರು ಕನ್ನಡಕ್ಕೆ ನೀಡಿದ ವಿಶೇಷ ಕೊಡುಗೆ... ಹಸ್ತಪ್ರತಿಗಳಲ್ಲಿಯ ರೇಖಾ ವಿನ್ಯಾಸ, ಬಣ್ಣಗಾರಿಕೆಗಳಂಥ ವಿಷಯಗಳ ಬಗ್ಗೆ ಅಧಿಕೃತವಾಗಿ ಮತ್ತು ವ್ಯಾಪಕವಾಗಿ ತಿಳಿದುಕೊಳ್ಳಬೇಕಾದರೆ ಕನ್ನಡದಲ್ಲಿ ನಾವು ಈ ಅಧ್ಯಾಯಕ್ಕೇ ಮೊರೆಹೋಗಬೇಕಾಗುತ್ತದೆ."[6] ಎಂದಿರುವುದು ಎಲ್ಲಾ ಸಮೀಕ್ಷೆಕಾರರು ಒಪ್ಪುವಂತಹದೇ ಆಗಿದೆ. ಡಾ. ಬಿ.ಕೆ.ಹಿರೇಮಠರ ಅಧ್ಯಯನಕ್ಕೆ ಹಸ್ತಪ್ರತಿಗಳ ಆಯ್ಕೆ ಒಂದು ಯೋಗಾಯೋಗ ಸಂಬಂಧವೇ ಆಗಿದೆ.

ಡಾ. ಬಿ.ಕೆ.ಹಿರೇಮಠರ ಸಂಶೋಧನೆಯಲ್ಲಿ, ನಡೆಯುವ ದಾರಿಯಲ್ಲಿಯ ಕಲ್ಲುಮುಳ್ಳುಗಳು ಕೂಡ ಸಂಶೋಧನಾ ಸಮಸ್ಯೆಗಳಾಗಿ ಮೈದೆಳೆದು ಫಲನೀಡುತ್ತವೆ ಎಂಬುದಕ್ಕೆ; ಗದಾಯುದ್ಧದ ಒಂದು ಪದ್ಯ, ರಾಮನಾಥ ಚರಿತದಲ್ಲಿ ದೇವತೆ–ಕುಟಿಲದೇವತೆಗಳ ಉಪಾಸನೆ: ಒಂದು ನೋಟ, ಕಟಕಟ ದೇವರು, ಗಣಪತಿಯೇ?, ಬೆಣ್ಣೆಹಚ್ಚು– ಒಂದು ವಿಚಾರ, ಹಣೆಬರಹ: ಒಂದು ಆಚರಣೆ–ಸಾಹಸ, ದರ್ಪಣದಲ್ಲೊಂದು ದರ್ಪಣ, ಹೇಮಕೂಟ, ಗದುಗಿನ ಸರಸ್ವತಿ ದೇವಾಲಯದ ಶಿಲ್ಪಿ ಕ್ರಿಯಾಶಕ್ತಿ ಪಂಡಿತ ದೇವರು, ಪಂಪನ ಭೀಷ್ಮ: ಒಂದು ಅಪೂರ್ವ ಪಾತ್ರ ಚಿತ್ರಣ, ಶರಣರು: ಭೌತವಾದ, ಅಡವಿಸಿದ್ದೇಶ್ವರ–ರೇವಣಸಿದ್ದೇಶ್ವರ ಪರಂಪರೆ ಮುಂತಾದವನ್ನು ಹೆಸರಿಸಬಹುದು. ಡಾ||ಬಿ.ಕೆ.ಯವರ ಈ ಎಲ್ಲಾ ಅಧ್ಯಯನಗಳನ್ನು ಅವಲೋಕಿಸಿದಾಗ ಇವರ ಸಂಶೋಧನೆಯು ವಿಷಯ ನಿಷ್ಠೆಯನ್ನು ಕಾಪಾಡಿಕೊಳ್ಳುವಲ್ಲಿ ಗುರುತಿಸುವ ಆಕರ, ವಿಶ್ಲೇಷಣೆ ಮತ್ತು ತೂಕ ಬದ್ಧ ಭಾಷೆಯಲ್ಲಿ ಬೆಳೆಯುವುದು, ಅವರ ಸಂಶೋಧನೆಯ ಶೈಲಿಯನ್ನು ಗುರುತಿಸುತ್ತದೆ.

**ಸಂಪಾದನೆ:** ಡಾ.ಬಿ.ಕೆ.ಹಿರೇಮಠರು ಹದಿಮೂರು ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. ಅವು ಸಾಹಿತ್ಯ, ಶಾಸನ, ಕಲೆ ಹಾಗೂ ರಂಗಭೂಮಿ ಮತ್ತು ರಂಗಭೂಮಿ ಸಾಹಿತ್ಯಕ್ಕೆ ಸಂಬಂಧಿಸಿದವಾಗಿದೆ. ಈ ಎಲ್ಲಾ ಕೃತಿಗಳು ಅವರ ಸಂಪಾದನಾ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿವೆ. ಇವರ ಸಂಪಾದನಾ ಕಾರ್ಯ ಆಸೆ, ಒತ್ತಡ, ಪ್ರತಿಷ್ಠೆಗಾಗಿ ಕೈಗೊಂಡವಲ್ಲ. ಉದ್ದೇಶಕ್ಕೆ ಸಂಬಂಧಿಸಿದಂತೆ ವಸ್ತು, ವಸ್ತು ನಿರ್ಮಾತೃಕೆ, ಓದು, ಅಧ್ಯಯನಗಳನ್ನು ದುಡಿಸಿಕೊಳ್ಳುವುದು ಎಂಬುದನ್ನು ಸಾಬೀತು ಪಡಿಸುತ್ತದೆ. ಭೀಷ್ಮ ಪಾತ್ರವನ್ನು ಆಧರಿಸಿ ಪಂಪಭಾರತದ ಸಂಪಾದನೆಯೇ; "ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವ" ಕೃತಿಯಾಗಿದೆ. ಭೀಷ್ಮನ ಪಾತ್ರವನ್ನು ಶೋಧಿಸುವುದು ಸವಾಲಿನ ಕಾರ್ಯವೇ ಆಗಿದ್ದು, ಅದಕ್ಕೆ ಒಪ್ಪಿಸಿದ ದೀರ್ಘ ಸಂಪಾದಕೀಯವು ಪಂಪನ ಪಾತ್ರಗಳ ಹೊಸ ಓದಿನ ಸ್ವರೂಪವನ್ನು ಕಟ್ಟಿಕೊಡುತ್ತದೆ. ಅದು ಪದವಿ ಪಠ್ಯದ ಕಕ್ಷೆಯನ್ನು ಹೊಂದಿದ್ದರೂ ಪಂಪನ ಅಧ್ಯಯನಗಳಲ್ಲಿ ವಿಶಿಷ್ಟವಾದ ಪ್ರಯತ್ನವಾಗುವುದು. "ವಚನ ಸಾಹಿತ್ಯ–7", ಕೃತಿಯು ತಾತ್ವಿಕತೆಯನ್ನು ಹೆಚ್ಚು

ಅಧ್ಯಯನಕ್ಕೆ ತೆಗೆದುಕೊಳ್ಳದ 36 ವಚನಕಾರರ ವಚನಗಳ ಸಂಪಾದನೆಯಾಗಿದೆ. ಇದು ಅಗತ್ಯ ಟಿಪ್ಪಣಿ– ವಚನಗಳ ಅರ್ಥಕೋಶವನ್ನು ಒಳಗೊಂಡಿದೆ. ಶರಣ ತತ್ವ ಪ್ರತಿಪಾದನೆಯನ್ನು ಕೆಲವೇ ವಚನಗಳಿಗೆ ಸೀಮಿತವಾಗಿಸಿಕೊಂಡು, ಆಯಾ ಶರಣರ ಒಟ್ಟು ವಚನ ತಿಳುವನ್ನು ಸಮೀಕರಿಸಿಕೊಂಡಂತೆ ನಿಭಾಯಿಸಿರುವುದು ಇಲ್ಲಿಯ ವೈಶಿಷ್ಟ್ಯ . ಮರೆಗುದ್ದಿಯ ಅಡವಿಸಿದ್ದೇಶ್ವರ ಮಠದ ಪೂಜ್ಯ ನಿರುಪಾಧೀಶರು, ಶರಣ ತತ್ವ ಆಚರಣೆಯ ಪ್ರತಿಬಿಂಬವಾಗಿದ್ದಾರೆ. ಇವರ ಒಟ್ಟು ವಚನಗಳ ಸಮಗ್ರ ಪರಿಕಲ್ಪನೆಯಲ್ಲಿ ಸಂಪಾದಿಸಿದ ಕೃತಿಯೇ, "ಉಲುಹಿನ ವೃಕ್ಷದ ನೆಳಲು". ನಿರುಪಾಧೀಶರ ಸಮಗ್ರ ವಚನಗಳನ್ನು; ಆತ್ಮಗತ, ಲೋಕಗತ, ಲೋಕಾತೀತಗತವೆಂದು ಸಂಯೋಜಿಸಿದ್ದು, ಪ್ರತಿ ವಚನದ ಪರಿಷ್ಕರಣೆಯೊಂದಿಗೆ, ಆ ವಚನಗಳ ಈ ಪೂರ್ವದ ಓದುಗಳನ್ನು ಅಂತ್ಯದಲ್ಲಿ ಜೋಡಿಸಿಕೊಂಡು ವಿಶೇಷ ಓದುಗಳ ಅಂತರ ಸಂಬಂಧದಿಂದ ಹೆಚ್ಚಿನ ಓದಿಗೆ ಅನುವಾಗುವಂತೆ ಸಂಪಾದನೆಯನ್ನು ನಿರ್ವಹಿಸಿದ್ದಾರೆ.

"ಶಕಪುರುಷ" ಡಾ. ಶಿ. ಚ. ನಂದಿಮಠರ ಜನ್ಮ ಶತಮಾನೋತ್ಸವದ ಅಂಗವಾಗಿ ಮೂಡಿಬಂದ ಗೌರವಗ್ರಂಥ. ನಂದಿಮಠರ ಸಾರ್ಥಕ ಜೀವನ ಸಾಧನೆಯನ್ನು ಬಿಂಬಿಸುವ ಬರಹಗಳು ಪೂರ್ವಭಾಗದಲ್ಲಿವೆ. ಕೃತಿಯ ಒಡಲಲ್ಲಿ ಕರ್ನಾಟಕದ ಹೊರ ಪ್ರಾಂತಗಳಾದ ಮಹಾರಾಷ್ಟ್ರ ಮತ್ತು ನಿರ್ದಿಷ್ಟವಾಗಿ ಕೊಲ್ಲಾಪುರ, ಆಂಧ್ರ, ತಮಿಳುನಾಡು, ಗೋವಾ ರಾಜ್ಯಗಳ ಕನ್ನಡ ಶಾಸನಗಳು ಹಾಗೂ ಹೊರನಾಡಿನಲ್ಲಿಯ ಬಾಣರ, ಬಾದಮಿ ಚಾಲುಕ್ಯರ, ರಾಷ್ಟ್ರಕೂಟರ, ಗಂಗರ, ನೊಳಂಬರ, ಹೊಯ್ಸಳರ ಮತ್ತು ಸಂಗಮ ಅರಸರ ಶಾಸನಗಳ ಅಧ್ಯಯನ ಬರಹಗಳೊಂದಿಗೆ, ಆಗ್ನೇಯ ಏಷ್ಯಾದೊಡನೆ ಕರ್ನಾಟಕದ ಸಂಸ್ಕೃತಿ ಸಂಬಂಧವೆಂಬ ಅಧ್ಯಯನ ಬರಹವನ್ನು ಒಳಗೊಂಡಿದೆ. ಒಟ್ಟಾರೆ ಈ ಹೊತ್ತಿಗೆಯು ಚರಿತ್ರೆ– ಶಾಸನ ಅಧ್ಯಯನ ಕ್ಷೇತ್ರದ ಮೌಲಿಕ ಆಕರಗ್ರಂಥವಾಗಿ ರೂಪುಗೊಂಡಿದೆ. "ಧರೆಗಿಳಿದ ಬಸವ ಬೆಳಗು" ಶ್ರೀ ಮಹಾಂತ ಶಿವಯೋಗಿಗಳ ಅಮೃತ ಮಹೋತ್ಸವದ ಅಭಿನಂದನಾ ಗ್ರಂಥವಾಗಿದೆ. ಅವರ ಪ್ರಗತಿಶೀಲ ಚಟುವಟಿಕೆಗಳಿಗೆ ಕನ್ನಡಿಯಾಗಿ ರೂಪುಗೊಂಡಿದೆ ಈ ಸಂಪಾದನಾ ಕೃತಿ."ನಿರುಪಾಧಿ" ಶ್ರೀ ನಿರುಪಾಧೀಶರ ಅಭಿನಂದನಾ ಗ್ರಂಥವಾಗಿದ್ದು, 5 ಉಪಾಧಿಗಳಲ್ಲಿ ಹರಡಿಕೊಂಡಿದೆ. ನಿರುಪಾಧೀಶರ ಮಠ–ಬದುಕು–ಬರಹ, ಅವರ ಸಾಧನೆಗಳನ್ನು ದರ್ಶಿಸುತ್ತದೆ. ಧರ್ಮ ದರ್ಶನ ಉಪಾಧಿಯು, ಶಿವೋಪಾಸನೆಯ ಚರಿತ್ರೆಯನ್ನು: ಮೂಲಭೂತ ಪರಿಕಲ್ಪನೆಯಿಂದ, ಶಿವಸೂತ್ರ ಆಗಮೋಕ್ತ, ವಿವಿಧ ಪಂಥ, ವಚನ ಮತ್ತು ಧರ್ಮ ಹಾಗೂ ಸಮಕಾಲೀನ ಸವಾಲುಗಳೊಂದಿಗೆ ಕಟ್ಟಿಕೊಟ್ಟ ಅಪೂರ್ವಭಾಗ, ಒಂದು ಶ್ರೇಷ್ಠ ಆಕರ ಗ್ರಂಥವಾಗಿಸಿದೆ. "ಮೃತ್ಯುಂಜಯ ಸಾಹಿತ್ಯ– ಸ್ಮರಣೆ" ಇದು ಶೂನ್ಯ ಸಂಪಾದನೆಯ ಪರಿಚಾರಿಕೆಯ ಕಾರ್ಯದೊಂದಿಗೆ ಶರಣ ತಾತ್ವಿಕ ಬದುಕು, ಬಾಳಿದ ಎಚ್.ಜಿ.ಮೃತ್ಯುಂಜಯರವರ ಸಮಗ್ರ ಸಾಹಿತ್ಯ ಹಾಗೂ ಅವರ ವ್ಯಕ್ತಿತ್ವ ಕುರಿತ ಬರಹಗಳನ್ನು ಹೊಂದಿದ ಬೃಹತ್ ಗ್ರಂಥವಾಗಿದೆ. ಶಿವಯೋಗ ಮಂದಿರದ ಶತಮಾನೋತ್ಸವ ಸಂದರ್ಭದಲ್ಲಿ (2010) ಡಾ॥ ಬಿ. ಕೆ. ಯವರ ಸಂಪಾದಕತ್ವದಲ್ಲಿ ಸಂಪಾದನೆಗೊಂಡ ಹೊತ್ತಿಗೆ "ಬೆಳಗಿನೊಳಗಣ ಬೆಳಗು". ಇದು

ವೀರಶೈವದ ಧರ್ಮವು ಸಮಾಜಮುಖಿಯಾದ ಚರಿತ್ರೆಯನ್ನು ದಾಖಲಿಸುವಲ್ಲಿ ಮಹತ್ವದ ಸಂಪಾದನಾ ಕೃತಿಯಾಗಿದೆ. ''ಸೃಜನ'' ''ರಂಗಬಾಗಿಲು'' ''ಸನ್ನಿಧಾನ'' ''ಕಲಾಕೋಶ'' ''ರಾಜ್ಯ ಪ್ರಶಸ್ತಿ ಪಡೆದ ಕಲಾವಿದರು'' ಇವು ಡಾ॥ ಬಿ.ಕೆ.ಯವರು ಇತರರೊಂದಿಗೆ ಹಾಗೂ ಸಾಂದರ್ಭಿಕವಾಗಿ ಸಂಪಾದಿಸಿದ ಇತರ ಸಂಪಾದನಾ ಕೃತಿಗಳಾಗಿವೆ.

**ಜೀವನಗಾಥೆ/ವ್ಯಕ್ತಿಚಿತ್ರಣ:** ''ವೈರಾಗ್ಯದ ಮಲ್ಲಣಾರ್ಯ'' ಮತ್ತು ''ಈಶ್ವರ ಸಣಕಲ್ಲ'' ಎಂಬವು ಡಾ॥ ಬಿ.ಕೆ.ಯವರು ರಚಿಸಿರುವ ಎರಡು ಗಮನಾರ್ಹ ಜೀವನ ಗಾಥೆಗಳು. ಮೊದಲನೆಯದು, ಬಾಗಲಕೋಟೆ ಮತ್ತು ವೀರಶೈವದ ಅರ್ವಾಚೀನ ಕಾಲಘಟ್ಟದ ಚಟುವಟಿಕೆಗಳಿಗೆ ಹೆಗಲು ಕೊಟ್ಟ ಸದಾಚಾರಿಯನ್ನು ಕುರಿತ ಪ್ರಪ್ರಥಮ ಬರಹ. ಮಲ್ಲಣಾರ್ಯರ ಜನನದಿಂದ ಶಿವಕಾಯವಾಗುವವರೆಗೆ ಆ ವೈರಾಗ್ಯನಿಧಿಯ ಪ್ರಸಂಗಗಳನ್ನು ಬರಹದಲ್ಲಿ ಚಿತ್ರಿಸಿದ ಹೊತ್ತಿಗೆಯದು. ಕನ್ನಡ ಸಾಹಿತ್ಯ ನವೋದಯ ಕಾಲಘಟ್ಟದಲ್ಲಿ ಅನುಭಾವ-ರಾಷ್ಟ್ರೀಯತೆಗಳಿಗೆ ಮೀಸಲಾಗಿಸಿಕೊಂಡ ಸಾಹಿತ್ಯಿಕ ಬದುಕು ಈಶ್ವರ ಸಣಕಲ್ಲರದು. ಅವರ ಹೆಸರಿನ ಈ ಕೃತಿಯಲ್ಲಿ ಅವರ ಬದುಕಿನ ಹಾಡು-ಪಾಡು ಅಭಿನ್ನವಾದದ್ದೆಂದೇ ಕೃತಿಯುದ್ದಕ್ಕೂ ವ್ಯಾಖ್ಯಾನಿಸಿದ್ದಾರೆ. ''ಶಿ. ಚ. ನಂದಿಮಠ'', ''ಸ.ಜ.ನಾಗಲೋಟಿಮಠ'', ''ಎಸ್.ಎಸ್.ಒಡೆಯರ'', ''ಎಂ.ಎಂ. ಕಲಬುರ್ಗಿ'', ''ಉಮಾಪತಿಶಾಸ್ತ್ರಿ'' ಮುಂತಾದವರ ಬಗ್ಗೆ ಲೇಖನದ ಮಿತಿಯಲ್ಲಿ ವ್ಯಕ್ತಿಚಿತ್ರಣಗಳನ್ನು ಬರೆಯುವಲ್ಲಿಯೂ ಡಾ.ಬಿ.ಕೆ.ಯವರ ಬರಹದ ಉದ್ದೇಶವನ್ನು ಗೌರವಿಸಿಕೊಂಡೆ ಕೈಗೊಂಡವು. ಅಲ್ಲಿಯ ವಸ್ತುನಿಷ್ಠ ನಿರೂಪಣೆಯು ಓದುಗರನ್ನು ಪರವಶರನ್ನಾಗಿಸುತ್ತವೆ.

**ಕಲಾಸಾಹಿತ್ಯ:** ಜಿ.ಎಸ್.ದಂಡಾವತಿಮಠ, ಅಮೀನ್‌ಸಾಬ ಕಮಡೋಳಿ, ಸೋಮಶೇಖರ ಸಾಲಿ ಮುಂತಾದ ಕಲಾವಿದರ ಜೀವನ ಕಲೆ ಸಾಧನೆಗಳನ್ನು ಬರೆದಿರುವುದು ಕನ್ನಡ ಕಲಾ ಸಾಹಿತ್ಯಕ್ಕೆ ಅವರು ನೀಡಿರುವ ಅಮೂಲ್ಯ ಕೊಡುಗೆಯಾಗಿದೆ. ಕಲೆಗಾಗಿ, ಕಲಾಶಿಕ್ಷಣಕ್ಕಾಗಿ ಜೀವ ತಳೆದಂತ ಶ್ರೇಷ್ಠ ಕಲಾವಿದ ಜಿ.ಎಸ್.ದಂಡಾವತಿಮಠರು. ಶ್ರೇಷ್ಠ ಕಲಾವಿದನಿಂದ ಒಂದು ಪರಂಪರೆಯೇ ನಿರ್ಮಾಣವಾಗುತ್ತದೆ. ಉತ್ಕಟ ಕಲಾಸಕ್ತಿಯು ಕಲಾ ಸಂಸ್ಥೆ ನಿರ್ಮಿಸುತ್ತದೆಂಬಂತೆ, ದಂಡಾವತಿಮಠರ ಬದುಕಿನಲ್ಲಿ ಈ ಉಭಯಗಳು ಸೇರಿರುವ ಪರಿಯನ್ನು ಡಾ॥ ಬಿ.ಕೆ.ಯವರು ಗುರುತಿಸಿ, ಅವರ ಕಲಾ ಸಮಪರ್ಪಿತವಾದ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ.

ಕಲಾವಿದ ಕಮಡೋಳಿಯವರ ಕಲಾ ಸಾಧನೆಯನ್ನು ಕುರಿತು ಬರೆಯುವಲ್ಲಿ, ಅವರ ಕಲಾಕೃತಿಗಳ ವಸ್ತು, ಅವುಗಳಿಗೆ ಬಳಸಿಕೊಂಡ ಮಾಧ್ಯಮಗಳ ಸಂಬಂಧಗಳಲ್ಲಿ ಅವರ ಕೌಶಲ್ಯವನ್ನು ಗುರುತಿಸಿರುವ ಡಾ॥ಬಿ.ಕೆ.ಯವರು ಅವರು ಮುಟ್ಟಿದ್ದೆಲ್ಲ ಕಲಾಕೃತಿ ಆಗುತ್ತಿತ್ತು ಎಂದು ಅವರ ಕಲಾದರ್ಶನಕ್ಕೆ ಮುಂದಾಗುತ್ತಾರೆ. ಅವರ ಕಲಾ ಪ್ರೌಢತೆಯ ಗುಟ್ಟನ್ನು ವಸ್ತು- ಮಾಧ್ಯಮಗಳನ್ನು ಸಂಬಂಧೀಕರಿಸುವಲ್ಲಿಯ ಆತ್ಮ

ವಿಶ್ವಾಸವನ್ನು ಅನುಸಂಧಾನಿಸುತ್ತಾರೆ. ಸಹೃದಯ ಮತ್ತು ಕಲಾವಿದರ ನಡುವಿನ ಸೇತುವೆಯಾಗಿ ಕೃತಿಯುದ್ದಕ್ಕೂ ಅವರ ಕಲಾಮೀಮಾಂಸೆಯನ್ನು ಪರೋಕ್ಷವಾಗಿ ನಿರ್ವಹಿಸಿದ್ದಾರೆ.

ನವೋದಯ ಸಂಪ್ರದಾಯದ ಹಿರಿಯ ಕಲಾವಿದರೆಂದು 'ಸೋಮಶೇಖರ ಸಾಲಿ'ಯವರನ್ನು ಗುರುತಿಸಿ, ಅವರ ಕಲಾಯಾನದ ವಸ್ತುಗತಿ, ನಿರ್ವಹಣಾ ಸಾಮರ್ಥ್ಯ ಮುಂತಾದ ಸಂಗತಿಗಳನ್ನು ಅವರ ಹೆಸರಿನ ಕೃತಿಯಲ್ಲಿ ವಸ್ತುನಿಷ್ಠವಾಗಿ ನಿರೂಪಿಸಿದ್ದಾರೆ. ಅಲ್ಲದೆ, ಸಾಂದರ್ಭಿಕವಾಗಿ "ಟಿ.ಪಿ.ಅಕ್ಕಿ", "ವಿಜಯ ಸಿಂಧೂರ", "ಫರ್ಡಿನಾಂಡ ಲೆಗರ್", "ಟ್ಯಾಗೋರರ" ಕುರಿತ ಜೀವನಗಾಥೆಗಳನ್ನು ಲೇಖನಗಳ ಮಿತಿಯಲ್ಲಿ ಬರೆಯುವಾಗಲೂ ಸಹ ಅವರ ಕಲಾಕೃತಿ ಮತ್ತು ಕಲಾವಂತಿಕೆಯನ್ನು ಸೂಕ್ಷ್ಮವಾಗಿ ಅವರ ಕಲಾ ವ್ಯಕ್ತಿತ್ವದೊಂದಿಗೆ ಸಂಯೋಜಿಸುತ್ತಾ ವಸ್ತುನಿಷ್ಠವಾಗಿ ಅವಲೋಕಿಸಿದ್ದಾರೆ.

ಚಿತ್ರಕಲಾ ವಿಮರ್ಶೆ, ಲಲಿತ ಕಲೆ ಮತ್ತು ವೀರಶೈವರು, ಜೈನ ಚಿತ್ರಕಲೆ, ಬಸದಿ: ಸಾಹಿತ್ಯ ಮತ್ತು ಚಿತ್ರಕಲೆ, ಭಾರತೀಯ ಕರಕುಶಲ ಕಲೆಗಳು; ಉಗಮ ವಿಕಾಸ–ಮುಂತಾದ ಮೌಲಿಕ ಕಲಾ ಬರಹಗಳು, ಇತರ ಸಾಂದರ್ಭಿಕ ಸಾಹಿತ್ಯ ಲೇಖನಗಳನ್ನು 'ಸೃಷ್ಟಿ' (2003), ಎಂಬ ಹೊತ್ತಿಗೆಯಲ್ಲಿ ಮರು ಮುದ್ರಿಸಿದ್ದಾರೆ. ಈ ಬರಹಗಳಲ್ಲಿ ವಸ್ತುವಿಶ್ಲೇಷಣೆ ಅವರ ಅಧ್ಯಯನಶೀಲತೆಯ ಸೂಕ್ಷ್ಮತೆಯು ಎದ್ದು ಕಾಣುವುದರೊಂದಿಗೆ ಕಲಾವಿಮರ್ಶಾ ಭಾಷೆಯನ್ನು ದುಡಿಸಿದ್ದು ವಿಶೇಷವೆನಿಸಿ ಸಹೃದಯರನ್ನು ಮೆಚ್ಚಿಸುತ್ತದೆ. ಈ ಬರಹಗಳು ನಾಡಿನ ಕಲಾ ಚರಿತ್ರೆಯನ್ನು ಮೌಲ್ಯಯುತವಾಗಿ ಮಾರ್ಗದರ್ಶಿಸುತ್ತವೆ.

**ಅನುವಾದ:** ಡಾ. ಬಿ.ಕೆ.ಯವರು ಇಂಗ್ಲೀಷ್ ಬರಹಗಳ ಅನುವಾದವನ್ನು ಕೈಗೊಂಡದ್ದುಂಟು. ನೈಜಲ್ ಅಲನ್‌ರವರ 'ಲಂಡನ್ನಿನ ವೆಲ್‌ಕಮ್ ಸಂಸ್ಥೆಯಲ್ಲಿರುವ ಔಷಧೀಯ ಚರಿತ್ರೆಗೆ ಸಂಬಂಧಿಸಿದ ಪೌರ್ವಾತ್ಯ ಹಸ್ತಪ್ರತಿಗಳ ಸಂಗ್ರಹ ಮತ್ತು ಈ ಆರ್.ಎಸ್.ನಂದಿಯವರ ಕಾಳಮುಖ ಶೈವರ ಮತೀಯ ವ್ಯವಸ್ಥೆಯ ಹುಟ್ಟು ಮತ್ತು ಸ್ವರೂಪ ಇತ್ಯಾದಿ ಬರಹಗಳ ಅವರ ಅಚ್ಚುಕಟ್ಟಾದ ಅನುವಾದ ಸಾಮರ್ಥ್ಯಕ್ಕೆ ನಿದರ್ಶನವಾಗಿವೆ. ಇವರ ಅನುವಾದದಲ್ಲಿ ಅಪೂರ್ಣ ಅಧಿಕ ವ್ಯತ್ಯಾಸಗಳು ಅನುಕರಣೀಯವೆನಿಸುತ್ತವೆ. ಡಾ.ಬಿ.ಕೆ.ಯವರ ವ್ಯಾಪಕ ಓದಿನಲ್ಲಿಯ ಅನುವಾದದ ಆಯ್ಕೆ– ಅನುವಾದಗಳು ಶೋಧಗುಣದವೇ ಆಗಿರುತ್ತವೆ. ಸಾಹಿತ್ಯ ಅಕಾಡೆಮಿಯಿಂದ ಜನಪ್ರಿಯ ಅನುವಾದ ಮಾಲಿಕೆಯಲ್ಲಿ ಪ್ರಕಟವಾದ "ಪ್ರಭುಲಿಂಗಲೀಲೆ" ಅನುವಾದವು ಅವರ ಕನ್ನಡ ಅವಸ್ಥೆಗಳ ಮೇಲಿನ ಪ್ರಭುತ್ವವನ್ನು ದರ್ಶಿಸುತ್ತದೆ.

**ಈ. ಕಲಾ ಸಾಧನೆ**

ನಾಡೋಜ ಶ್ರೀ ಕಾಳೆಯವರು ಡಾ|| ಬಿ.ಕೆ.ಯವರ ಚಿತ್ರಕಲಾ ಮೇಸ್ಟ್ರು ಅವರನ್ನು ವಿದ್ಯಾರ್ಥಿ ದೆಸೆಯಿಂದ ನೋಡುತ್ತಾ ಬಂದವರಾಗಿದ್ದು, ಸಾಂದರ್ಭಿಕವಾಗಿ

ಇವರ ಕಲಾವಂತಿಕೆಯನ್ನು ಹೀಗೆ ಪರಿಚಯಿಸುತ್ತಾರೆ; "ವಿದ್ಯಾರ್ಥಿ ದೆಸೆಯಲ್ಲಿ ಡಾ॥ ಬಿ.ಕೆ.ಹಿರೇಮಠ ಅವರು ಕೇವಲ ಕಲಾ ಅಭ್ಯಾಸ ಮಾಡುವ ವಿದ್ಯಾರ್ಥಿಯಾಗಿರಲಿಲ್ಲ. ಬದಲಾಗಿ ಕಲೆಯ ಅಂತರಾಳದ ನಿಗೂಢತೆಯನ್ನು ಭೇದಿಸುವ ಒಬ್ಬ ಸಾಧಕನಾಗಿ, ಅವರು ತಮ್ಮ ಕಲಾ ಜೀವನವನ್ನು ಆರಿಸಿಕೊಂಡವರು; ಆ ನಿಟ್ಟಿನಲ್ಲಿಯೆ ಸಾಧನೆ ಗೈದವರು."[7]

ಡಾ॥ ಬಿ.ಕೆ. ಹಿರೇಮಠರಿಗೆ ಚಿತ್ರಕಲೆ ಒಂದು ರೀತಿಯಲ್ಲಿ ಒಳವ್ಯಕ್ತಿತ್ವ. ಕಲೆಗೆ ಕೈ ಸಿದ್ಧಿಸಿಕೊಳ್ಳುತ್ತಲೇ ಅಕಾಡೆಮಿಕ್ ಸ್ವರೂಪವನ್ನು ಸಂಸ್ಕರಿಸಿಕೊಂಡವರು. ಸಾಹಿತ್ಯದಂತೆ ಕಲೆಯ ವ್ಯಾಪಕ ಅಧ್ಯಯನವನ್ನು ಕೈಗೊಂಡಿರುವ ಡಾ.ಬಿ. ಕೆ.ಹಿರೇಮಠರು ಕನ್ನಡ ಹಾಗೂ ಭಾರತೀಯ ಸಂದರ್ಭದಲ್ಲಿ ವಿಶಿಷ್ಟ ಚಿತ್ರಕಲಾವಿದ ಹಾಗೂ ಚಿತ್ರಕಲಾ ಸಾಹಿತಿ. ಗದಗಿನ ಮುನ್ಸಿಪಲ್ ಶಾಲೆ ಹಾಗೂ ವಿಜಯ ಕಲಾಮಂದಿರಗಳು ಅವರ ಕಲಾವಂತಿಕೆಯ ರೂಪುರೇಷಗಳನ್ನು ವಿಸ್ತರಿಸಿಕೊಟ್ಟ ನೆಲೆಗಳು. ಇವರ ಕುಂಚದಿಂದ ಮೈದೆಳೆದ ಕಲಾಕೃತಿಗಳು ಕಳೆದ ಶತಮಾನದ 70ರ ದಶಕದಿಂದ ಕರ್ನಾಟಕದ ಪ್ರಮುಖ ನಗರಗಳಲ್ಲಿ ಹಾಗೂ ವಿಭಿನ್ನ ಸಂದರ್ಭದಲ್ಲಿ ಪ್ರದರ್ಶನಗೊಳ್ಳುತ್ತಾ ಬಂದಿವೆ. ಶ್ರೇಷ್ಠ ಕಲಾವಿದರ ಹಾಗೂ ಕಲಾಸಕ್ತರ ಮೆಚ್ಚುಗೆಯನ್ನು ಪಡೆದಿವೆ. ಇವರ ಕಲಾ ಕೃತಿಗಳು ನಾಡಿನ–ದೇಶದ–ವಿದೇಶದ ಪ್ರಮುಖ ಸಂಸ್ಥೆ ಹಾಗೂ ಕಲಾಸಕ್ತರಲ್ಲಿ ಎಡೆಪಡೆದಿವೆ. ಅವರ ಕಲಾವಿಶಿಷ್ಟತೆ, ಕಲಾ ಕ್ಷೇತ್ರದ ಸಂಪನ್ಮೂಲದ ಅಪರೂಪತೆಯಿಂದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆಸಲ್ಲಿಸುತ್ತಾರೆ. ಜೊತೆಗೆ ಆ ಅಕಾಡೆಮಿಯ ಗೌರವ ಪ್ರಶಸ್ತಿಗೆ ಪಾತ್ರರಾಗುತ್ತಾರೆ. ಡಾ॥ ಬಿ.ಕೆ.ಯವರ ಕಲಾಕೃತಿಗಳನ್ನು ಸ್ಥೂಲವಾಗಿ ಅಂಕನ, ಭಾವ, ನಿಸರ್ಗಚಿತ್ರಗಳೆಂದು ಗುರುತಿಸಬಹುದು. ಅಂಕನ ಕೃತಿಗಳಿಗೆ; ಪೆನ್ಸಿಲ್, ಪೆನ್ ಹಾಗೂ ಇಂಕ್‌ಗಳನ್ನು ಮಾಧ್ಯಮವಾಗಿಸಿಕೊಂಡರೆ, ಭಾವ, ನಿಸರ್ಗ ಕೃತಿಗಳಿಗೆ ಜಲ ಹಾಗೂ ತೈಲ ವರ್ಣಗಳನ್ನು ಮಾಧ್ಯಮವಾಗಿಸಿಕೊಂಡಿದ್ದಾರೆ. ಹೆಚ್ಚಿನ ಚಿತ್ರಕೃತಿಗಳು ತೈಲವರ್ಣದ ಸೂಕ್ಷ್ಮ ಸಂಯೋಜನೆಗಳಾಗಿವೆ.

ಡಾ॥ ಬಿ. ಕೆ.ಯವರ ಕಲಾಕೃತಿಗಳು ಮನುಷ್ಯನ ಅಂತರ್ ಮುಖಿ ಶೋಧಗತಿಯವು. ಅವರ ಯಾವುದೇ ಕಲಾಕೃತಿ, ಯಾವುದೇ ಮಾಧ್ಯಮದೊಂದಿಗೆ ರೂಪುಗೊಂಡರೂ ಅವು ಅರ್ಥಶೋಧ ಕ್ರಿಯೆಗೆ ಅಣಿಯಾಗುತ್ತವೆ. ಅದು ಅವರಿಗಿರುವ ತರ್ಕಶಾಸ್ತ್ರ, ತತ್ವಶಾಸ್ತ್ರಗಳ ವಿಷಯ ಸಂಬಂಧಿ ಒಲವು ಹಾಗೂ ಸಾಹಿತ್ಯದ ಗಂಭೀರ ಓದುಗಳ ಕಾರಣವಾಗಿ ಪ್ರೇರಣೆಗೊಂಡವಾಗಿವೆ. ಅದರಿಂದಾಗಿ ಸಂಕೇತಗಳು ಬಳಕೆಗೊಂಡು, ಕಲಾಕೃತಿಗಳು ಒಂದು ರೀತಿಯ ಹೊಸ ಚಿತ್ರಭಾಷೆಯ ಶೋಧದ ಸ್ವರೂಪದವಾಗಿ ಗೋಚರಿಸುತ್ತವೆ. ಪ್ರಕೃತಿ–ಧರ್ಮ–ಮಾನವೀಯತೆ–ಮನುಷ್ಯತ್ವಗಳ ಸಹಜ ತಾತ್ವಿಕತೆಯನ್ನು ವಸ್ತುವಾಗಿ ವಿನ್ಯಾಸಗೊಳಿಸುತ್ತಾ ಸಾರ್ವಕಾಲಿಕ ಮೌಲ್ಯಗಳನ್ನು ಪ್ರಕಟಿಸುತ್ತವೆ.

ಡಾ॥ ಬಿ.ಕೆ. ಹಿರೇಮಠರ ಕಲಾಕೃತಿಗಳನ್ನು ಒಟ್ಟಂದದಲ್ಲಿ ಅವಲೋಕಿಸಿದಾಗ

ಅವರ ಬೌದ್ಧಿಕ ಸಂಪನ್ಮೂಲ ಮತ್ತು ವೈಚಾರಿಕತೆಯ ಪ್ರೇರಣೆಯಿಂದ ಆಯ್ದುಕೊಂಡ ವಸ್ತುಗಳಾಗಿವೆ. ಅವುಗಳ ನಿರ್ವಹಣೆ ಮತ್ತು ಬಳಸಿಕೊಂಡ ಪರಿಕರ ಮಾಧ್ಯಮಗಳು ತುಂಬಾ ವಿಶಿಷ್ಟವಾಗಿ, ಸಾಂಕೇತಿಕ ಶೈಲಿಯವಾಗಿ ತೋರುತ್ತವೆ. ಸಂಕೇತವನ್ನು ಸೃಷ್ಟಿಸುವ ಇವರ ಕುಂಚ ಕ್ರಿಯೆಯು ಅರ್ಥಕಲ್ಪನೆಗಳನ್ನು ವಿಸ್ತರಿಸುತ್ತದೆ. ಅಮೂರ್ತ ಮತ್ತು ಮೂರ್ತಗಳ ಮಧ್ಯ ಬೆಳೆದು ನಿಲ್ಲುವ ಚಿತ್ರಭಾಷೆಯಂತೂ ಬೆರಗು ಮೂಡಿಸುತ್ತದೆ. ದೇಶಿ-ಅಭಿಜಾತ-ಪಾಶ್ಚಾತ್ಯ ಕಲಾ ಸಂಪ್ರದಾಯಗಳ ಸೂಕ್ತ ಅಳವಡಿಕೆಯಲ್ಲಿ ಅವುಗಳ ಯಾದೃಚ್ಛಿಕತೆಯನ್ನು ಅಳಿಸುತ್ತಾ ಸಾರ್ವತ್ರಿಕ ಚಿತ್ರಭಾಷೆಯನ್ನು ಪ್ರತಿಷ್ಠಾಪಿಸುತ್ತವೆ. ಈ ಕಾರಣವಾಗಿ ನವ್ಯತೆಯನ್ನು ಪರಂಪರೆಯೊಂದಿಗೆ ಸಮೀಕರಿಸುವಲ್ಲಿ ಬದುಕಿನ ನೆಲೆಗಳನ್ನು ಶೋಧಿಸುವಲ್ಲಿ ಸಫಲರಾಗುತ್ತಾರೆ. ಅವರಿಗೆ ಅವರ ಕಲಾಬೌದ್ಧಿಕೆಯ ಬಗ್ಗೆ ಅಪಾರ ಆತ್ಮವಿಶ್ವಾಸವಿದ್ದು, ನವೀನ ಸಂಕೇತಗಳನ್ನು ಶೋಧಿಸುವಲ್ಲಿ ಅವರದೇ ಮಾರ್ಗವನ್ನು ಅನುಸರಿಸಿದ್ದರು. ಈ ನಿಟ್ಟಿನಲ್ಲಿ ನಾಡೋಜ ಕಾಳೆಯವರು ಸಾಂದರ್ಭಿಕವಾಗಿ ಇವರ ಕಲಾವಂತಿಕೆಯ ಬಗ್ಗೆ ಹೇಳಿದ ಮಾತುಗಳು ಗಮನಾರ್ಹವೆನಿಸುತ್ತವೆ. "...ತಮ್ಮ ಸಾಧನೆಯನ್ನು ಕುರಿತು ಅವರು ತಮ್ಮ ಸ್ನೇಹಿತರೊಂದಿಗಾಗಲಿ ಇತರರೊಂದಿಗಾಗಲಿ ಹೇಳಿಕೊಂಡು ಬೀಗುವ ಪರಿಪಾಠವನ್ನು ಬೆಳೆಸಿಕೊಂಡವರಲ್ಲ. ತಮ್ಮ ಸಾಧನೆಗಳನ್ನು ಕುರಿತು ಪತ್ರಿಕಾ ಪ್ರಸಾರವನ್ನು ಬಯಸಿದವರಲ್ಲ. ಹೆಸರಿಗಾಗಿ, ಪ್ರಶಸ್ತಿಗಾಗಿ ಕೀಳು ರಾಜಕೀಯಕ್ಕಿಳಿಯುವ ಮನೋಭಾವ ಅವರಲ್ಲಿಲ್ಲ. ಒಂದು ವೇಳೆ ಅಂಥ ಭಾವನೆಗಳು ಅವರಲ್ಲಿದ್ದರೆ ಈ ವೇಳೆಗೆ ಅವರೊಬ್ಬ ಅಂತರರಾಷ್ಟ್ರೀಯ ಕಲಾವಿದರಾಗಿ ಮೆರೆಯಬಹುದಿತ್ತು. ದೇಶದ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳು ಅವರ ಶೋಕೇಸ್‌ಗಳನ್ನು ಅಲಂಕರಿಸಬಹುದಿತ್ತು. 'ನನ್ನಲ್ಲಿರುವ ಸತ್ವ ಶಕ್ತಿಯನ್ನು ನನ್ನ ಕೃತಿಗಳೇ ಅಭಿವ್ಯಕ್ತಿಸುತ್ತವೆ; ಅದಕ್ಕಾಗಿ ನಾನೇಕೆ ಪ್ರಚಾರವನ್ನು ಬಯಸಬೇಕು?' ಎಂಬ ದಿವ್ಯ ಅಹಂಭಾವ ಅವರಲ್ಲಿದೆ. ಸದಾ ಸಾಧನೆಯ ಚಿಂತನೆಯಲ್ಲಿರುವ ಯಾವುದೇ ವ್ಯಕ್ತಿ ಲೌಕಿಕ ಒಣ ಪ್ರತಿಷ್ಠೆಗಳಿಂದ ನಿರ್ಲಿಪ್ತವಾಗಿರುತ್ತಾರೆ ಎಂಬುದಕ್ಕೆ ಡಾ॥ ಬಿ. ಕೆ. ಹಿರೇಮಠ ಅವರೊಂದು ಜೀವಂತ ನಿದರ್ಶನವಾಗಿದ್ದಾರೆಂದು ನನ್ನ ಅನಿಸಿಕೆ."[8]

ಡಾ॥ ಬಿ.ಕೆ.ಯವರು ಸಮಕಾಲೀನ ಕಲೆ, ಸಾಹಿತ್ಯ ಎರಡರಲ್ಲಿಯೂ ಗಮನಿಸಲೇಬೇಕಾದ ಅಗ್ರಗಣ್ಯರಲ್ಲಿ ತೀರ ವಿಶಿಷ್ಟರು. ಅವರು ಕುಂಚ ಹಿಡಿದರೂ ಲೇಖನಿ ಹಿಡಿದರೂ ಆಳವಾದ ಅಧ್ಯಯನ ಬಲದಿಂದ ಚಿಂತನೆ, ವೈಚಾರಿಕತೆ, ಪ್ರಾಮಾಣಿಕ ನಿಲುವು, ವಿದ್ವತ್ತುಗಳು ಅವರ ಅಕಾಡೆಮಿಕ್ ಶಿಸ್ತಾಗಿ ತೋರುತ್ತವೆ. ಅವರ ಬದುಕಿನ ಸಾಧನೆಯ ಹಾದಿಯು ಪ್ರಮಾಣಕ್ಕಿಂತ ಗುಣಾತ್ಮಕತೆಗೆ ಒತ್ತು ನೀಡಿದ್ದಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

## ಕೊನೆ ಟಿಪ್ಪಣಿಗಳು:

1. ಕ್ರಮವಾಗಿ 1967ರಲ್ಲಿ ಜೆ.ಡಿ.ಇನ್ ಆರ್ಟ್, 1968ರಲ್ಲಿ ಎ.ಎಂ. (ಆರ್ಟ್ ಮಾಸ್ಟರ್) ಪದವಿಯನ್ನು ಪೂರೈಸುತ್ತಾರೆ. ಅವರು ಪೂರೈಸಿದ ಎಲ್ಲಾ ಕಲಾ ಪದವಿಗಳ ಪರೀಕ್ಷೆಗಳಲ್ಲಿ ರಾಜ್ಯಕ್ಕೆ ಪ್ರಥಮರಾಗಿ ತೇರ್ಗಡೆಯಾಗುತ್ತಾರೆ.
2. ದೊಕ್ಕಲ ಮಕ್ಕಳು ಒಂದು ಅಧ್ಯಯನ, ಶಂಕರ ದಾಸಿಮಯ್ಯ ಪುರಾಣ ಒಂದು ಅಧ್ಯಯನ, ಅದೃಷ್ಯಕವಿ ಒಂದು ಅಧ್ಯಯನ, ಕರಸ್ಥಲ ಪರಂಪರೆ ಒಂದು ಅಧ್ಯಯನ ಇತ್ಯಾದಿ
3. ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ (1992) ಡಾ. ಬಿ.ಕೆ.ಹಿರೇಮಠ, ವೀರಶೈವ ಅಧ್ಯಯನ ವೇದಿಕೆ, ಶ್ರೀ ಹಿರೇಮಠ, ಕಸಬಾ ಜಂಬಗಿ. ತಾ: ಮುಧೋಳ. ಪುಟ: viii
4. ಅದೇ ಪುಟ: x
5. ಅದೇ ಪುಟ: ix
6. ಅದೇ ಪುಟ: ix
7. ನಿಜದ ನೆಲೆ (2023) ಪ್ರ.ಸಂ. ಡಾ. ಬಿ.ಆರ್. ಹಿರೇಮಠ, ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟ. ಪುಟ: 1028
8. ಅದೇ ಪುಟ: 1028–1029

## ಪರಾಮರ್ಶನ ಗ್ರಂಥಗಳು:


1. ಹಿರೇಮಠ ಬಿ.ಕೆ., (1992), ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ಕಸಬಾ ಜಂಬಗಿ (ಮುಧೋಳ): ವೀರಶೈವ ಅಧ್ಯಯನ ವೇದಿಕೆ, ಶ್ರೀ ಹಿರೇಮಠ.
2. ಹಿರೇಮಠ ಬಿ.ಆರ್. (ಪ್ರ.ಸಂ), (2023), ನಿಜದ ನೆಲೆ, ಬಾಗಲಕೋಟ: ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ.
3. ಹಿರೇಮಠ ಬಿ.ಕೆ., (2023), ಸೃಷ್ಟಿ, ಬಾಗಲಕೋಟ: ಬಾಪೂಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ).
4. ಸೀತಾರಾಮಯ್ಯ ವಿ., (2018), ಪ್ರತಿಭಾ ಸಂಪನ್ನರು (ಭಾಗ–7), ಬೆಂಗಳೂರು: ವಿ.ಸೀ. ಸಂಪದ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.